ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೬೪

ಪಟ್ಟಿ – ೧೩

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೊಂಬತ್ತನೇ ಅಧಿವೇಶನ

ಬುಧವಾರ, ದಿನಾಂಕ : ೧೫ನೇ ಜುಲೈ, ೨೦೧೫

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## "ವಿಕೋಪ ಉಪಶಮನ ನಿಧಿ" ಸ್ಥಾಪನೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೧ (೧೩೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನೈಸರ್ಗಿಕ ವಿಕೋಪ ಹಾಗೂ ಕೀಟಬಾಧೆಗಳಿಂದ ಬೆಳೆನಾಶ ಹಾಗೂ ಜಾನುವಾರು ನಾಶವಾದಂತಹ ವಿಪತ್ತುಗಳಿಂದ ರೈತರನ್ನು ಪಾರು ಮಾಡಲು "ವಿಕೋಪ ಉಪಶಮನ ನಿಧಿ" ಸ್ಥಾಪಿಸಲಾಗಿದೆಯೇ ; ಸ್ಥಾಪಿಸಲಾಗಿದ್ದಲ್ಲಿ ಯಾವಾಗ ; ಇದಕ್ಕಾಗಿ ಕಾಯ್ದಿರಿಸಲಾಗಿರುವ ಹಣ ಎಷ್ಟು ; ಇದರಿಂದ ರೈತರಿಗೆ ಯಾವ ರೀತಿ ಅನುಕೂಲವಾಗಿದೆ ;

(ಆ) ಪ್ರಕೃತಿ ವಿಕೋಪಗಳಿಂದ ಬೆಳೆಹಾನಿಗೊಳಗಾದ ಎಷ್ಟು ರೈತರಿಗೆ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಿಂದ ಪರಿಹಾರ ನೀಡಲಾಗಿದೆ ; ಯಾವ ಯಾವ ಜಿಲ್ಲೆಗಳನ್ನು ರಾಷ್ಟ್ರೀಯ ಕೃಷಿ ಜೀವ ವಿಮಾ ಯೋಜನೆಯಡಿಯಲ್ಲಿ ತರಲಾಗಿದೆ ; ಪರಿಹಾರ ಪಡೆದ ರೈತ ಫಲಾನುಭವಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಬೆಳೆ ಪರಿಹಾರದ ಮೊತ್ತದ ವಿವರ ನೀಡುವುದು)

## ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳನ್ನು ಬಲಪಡಿಸುವ ಬಗ್ಗೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೨ (೧೩೧೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳು ಹಣದ ಕೊರತೆಯಿಂದಾಗಿ (ಕಾಡಾಗಳು) ನಿಷ್ಕ್ರಿಯಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಸದರಿ ಪ್ರಾಧಿಕಾರಗಳನ್ನು ಪುನಃಶ್ಚೇತನಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದೇ ;

(ಇ) ಕಾಡಾಗಳಿಗೆ ಹೆಚ್ಚಿನ ಅಧಿಕಾರ ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೇ ?

## ರಾಜ್ಯಾದ್ಯಂತ ಪ್ಲಾಸ್ಟಿಕ್ ಕೈಚೀಲಗಳ ಉತ್ಪಾದನೆ, ಮಾರಾಟ ಮತ್ತು ಬಳಕೆ ನಿಷೇಧಿಸುವ ಬಗ್ಗೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೩ (೧೭೮೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ಲಾಸ್ಟಿಕ್ ಹಾವಳಿಯಿಂದಾಗಿ ಹೆಚ್ಚಿನ ಪರಿಸರ ಮಾಲಿನ್ಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಪ್ಲಾಸ್ಟಿಕ್ ಕೈಚೀಲಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ಯಾವಾಗ ಸಂಪೂರ್ಣವಾಗಿ ನಿಷೇಧಿಸಲಾಗುವುದು ;

(ಇ) ಪ್ಲಾಸ್ಟಿಕ್ ತ್ಯಾಜ್ಯದಿಂದ ರಸ್ತೆಗಳ ನಿರ್ಮಾಣ ಮಾಡುವುದನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದೇ ?

## ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕ್ರೀಡೆ, ಆಟಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೩೪ (೧೭೮೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕ್ರೀಡೆ, ಆಟಗಳ ವಿಷಯದಲ್ಲಿ ಮೂಲ ಸೌಕರ್ಯ ಮತ್ತು ಸಮರ್ಥ ಕ್ರೀಡಾಪಟುಗಳಿಂದ ತರಬೇತಿ ಪಡೆಯುವ ಅವಕಾಶದಿಂದ ಉತ್ತರ ಕರ್ನಾಟಕದ ಯುವಕರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕ್ರೀಡೆ, ಆಟಗಳಿಗಾಗಿ ಹೆಚ್ಚಿನ ಮೂಲ ಸೌಕರ್ಯಗಳನ್ನು ಮತ್ತು ಸೂಕ್ತ ತರಬೇತಿ ಕೇಂದ್ರಗಳನ್ನು ತೆರೆಯಲಾಗುವುದೇ ;

(ಇ) ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕ್ರೀಡೆ, ಆಟಗಳಿಗೆ ಪ್ರೋತ್ಸಾಹ ನೀಡಲು ಹೆಚ್ಚಿನ ಧನ ಸಹಾಯವನ್ನು ಒದಗಿಸಲಾಗುವುದೇ ?

**ರಾಜ್ಯದ ಕ್ರೀಡಾ ಶಾಲೆಗಳ ಸಂಖ್ಯೆ ತರಬೇತಿ ಸೌಲಭ್ಯಗಳ ಕುರಿತು**

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೩೫ (೧೩೧೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕ್ರೀಡಾ ಶಾಲೆಗಳ ಸಂಖ್ಯೆ ಎಷ್ಟು ; ತರಬೇತಿ ನೀಡುತ್ತಿರುವ ಕ್ರೀಡೆಗಳು ಯಾವುವು ; ಇಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ವಿವರಗಳನ್ನು ಒದಗಿಸುವುದು)

(ಆ) ಕ್ರೀಡಾ ವಸತಿ ಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿವೆಯೇ ; ಹೊಂದಿದ್ದಲ್ಲಿ ಎಷ್ಟು ವಸತಿ ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿವೆ ; ಇಲ್ಲದಿದ್ದಲ್ಲಿ ಕಾರಣಗಳೇನು ; (ವಿವರ ನೀಡುವುದು)

(ಇ) ರಾಜ್ಯದಲ್ಲಿರುವ ಒಳಾಂಗಣ ಕ್ರೀಡಾಂಗಣ ಹಾಗೂ ಕ್ರೀಡಾ ಸಂಕೀರ್ಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ಬೆಂಗಳೂರು ನಗರದಲ್ಲಿನ ವಿಧಾನಸಭಾ ಕ್ಷೇತ್ರಾವಾರು ವಿವರ ನೀಡುವುದು)

(ಈ) ನಗರದಲ್ಲಿ ಕ್ರೀಡಾ ಸಂಕೀರ್ಣಗಳು (ಸ್ಪೋರ್ಟ್ಸ್ ಕಾಂಪ್ಲೆಕ್ಸ್) ಬಳಕೆಗೆ ಬಾರದೆ ಅನುಪಯುಕ್ತವಾಗಿರುವ ಬಗ್ಗೆ ಯಾವುದಾದರೂ ವರದಿಗಳು ಬಂದಿವೆಯೇ ;

(ಉ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಸದರಿ ಕಟ್ಟಡಗಳು ಉಪಯೋಗವಾಗುವಂತೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ? (ವಿವರಗಳನ್ನು ಒದಗಿಸುವುದು)

## ಮುಧೋಳ ತಾಲ್ಲೂಕಿನ ಏತ ನೀರಾವರಿ ಯೋಜನೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೬ (೧೩೧೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಧೋಳ ತಾಲ್ಲೂಕಿನ ಉತ್ತೂರು ಜಾಲಿಬೇರ ಗ್ರಾಮದಲ್ಲಿ ಏತ ನೀರಾವರಿ ಯೋಜನೆ ಪ್ರಾರಂಭವಾಗಿ ೩೭ ವರ್ಷಗಳ ನಂತರವೂ ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಯೋಜನೆಯ ಮೂಲ ಅಂದಾಜು ಹಾಗೂ ಇದುವರೆವಿಗೂ ಭರಿಸಲಾದ ವೆಚ್ಚ ಎಷ್ಟು ; (ವಿವರ ನೀಡುವುದು)

(ಇ) ಈ ಯೋಜನೆಯ ಮೂಲ ಅಚ್ಚುಕಟ್ಟು ಪ್ರದೇಶ ಹಾಗೂ ಪರಿಷ್ಕೃತ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ ಎಷ್ಟು ; (ವಿವರ ನೀಡುವುದು)

(ಈ) ಯೋಜನೆ ಅನುಷ್ಠಾನದಲ್ಲಿ ಸಂದಿಗ್ಧತೆಗಳನ್ನು ನಿವಾರಿಸಿ, ಯೋಜನೆಯನ್ನು ಸಕ್ರಿಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಎಸ್.ಸಿ.ಪಿ. ಅಡಿಯಲ್ಲಿ ತಾಂತ್ರಿಕ ದೋಣಿಗಳನ್ನು ವಿತರಿಸುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೭ (೧೩೧೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ ಮತ್ತು ೨೦೧೪-೧೫ನೇ ಸಾಲಿನಲ್ಲಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ., ಅಡಿಯಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಯಾಂತ್ರಿಕ ದೋಣಿಗಳನ್ನು ವಿತರಿಸಲಾಗಿದೆ ;

(ಆ) ಯಾವ ಯಾವ ಜಿಲ್ಲೆಗಳಿಗೆ ಯಾಂತ್ರಿಕ ದೋಣಿಗಳನ್ನು ನೀಡಲಾಗಿದೆ ; ಇದಕ್ಕೆ ತಗಲಿರುವ ಹಣ ಎಷ್ಟು ? (ಕಳೆದ ೨ ವರ್ಷಗಳ ಜಿಲ್ಲಾವಾರು ಫಲಾನುಭವಿಗಳ ಮಾಹಿತಿ ನೀಡುವುದು)

## ಗ್ರಾಮ ಸಹಾಯಕರಿಗೆ ಹುದ್ದೆಗೆ ಸಮಾನ ವೇತನ ನೀಡುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೮ (೧೩೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರಿಗೆ ನೀಡುತ್ತಿರುವ ಮಾಸಿಕ ವೇತನ ಎಷ್ಟು; (ಭತ್ಯೆಯನ್ನೊಳಗೊಂಡಂತೆ ವೇತನದ ವಿವರ ನೀಡುವುದು)

(ಆ) ಈ ನೌಕರರು ದಿನ ನಿತ್ಯ ನಿರ್ವಹಿಸುತ್ತಿರುವ ಕೆಲಸಗಳೇನು ; ಹಾಲಿ ನೀಡುತ್ತಿರುವ ವೇತನವು ಅವರು ನಿರ್ವಹಿಸುತ್ತಿರುವ ಕೆಲಸಕ್ಕೆ ಅನುಗುಣವಾಗಿದೆಯೇ ;

(ಇ) ಹಾಗಿದ್ದಲ್ಲಿ, ಅವರ ವೇತನ ಮತ್ತು ಭತ್ಯೆಯನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಎಸ್.ಸಿ./ಎಸ್.ಟಿ. ಕ್ರೀಡಾ ಪಟುಗಳಿಗೆ ಸೌಲಭ್ಯ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೩೯ (೧೩೧೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಯುವಕರಿಗಾಗಿ ಇರುವ ಕಾರ್ಯಕ್ರಮಗಳೇನು ;

(ಆ) ಈ ಯುವಕರಿಗೆ ನೀಡುವ ಸೌಲಭ್ಯಗಳು ಯಾವುವು ;

(ಇ) ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ? (ವಿವರ ನೀಡುವುದು)

## ಬೆಂಗಳೂರಿನ ಸುತ್ತಮುತ್ತ ಒತ್ತುವರಿ ತೆರವುಗೊಳಿಸಿರುವ ಜಮೀನು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೪೦ (೧೩೨೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಸುತ್ತಮುತ್ತ ಒತ್ತುವರಿ ತೆರವುಗೊಳಿಸಿರುವ ಸರ್ಕಾರಿ ಜಮೀನನ್ನು ಯಾವ ಯಾವ ಇಲಾಖೆ ಮತ್ತು ಸ್ವಾಯತ್ತ ಸಂಸ್ಥೆಗಳಿಗೆ, ಎಷ್ಟೆಷ್ಟು ಎಕರೆಯನ್ನು ಯಾವ ಯಾವ ನಿಬಂಧನೆಗಳೊಂದಿಗೆ ಯಾವ ಯಾವ ದಿನಾಂಕಗಳಂದು ಮಂಜೂರು ಮಾಡಲಾಗಿದೆ ;

(ಆ) ಯಾವ ಯಾವ ಇಲಾಖೆಗಳು ನಿಯಮಗಳನ್ವಯ ಸದರಿ ಜಮೀನುಗಳನ್ನು ಅಭಿವೃದ್ಧಿಪಡಿಸಿರುತ್ತಾರೆ ;

(ಇ) ಈವರೆವಿಗೂ ನಿಬಂಧನೆಗಳಿಗನುಸಾರವಾಗಿ ಅಭಿವೃದ್ಧಿಪಡಿಸದೇ ಇರುವ ಸಂಸ್ಥೆಗಳು ಯಾವುವು; ಸದರಿ ಸಂಸ್ಥೆಗಳಿಂದ ಜಮೀನನ್ನು ಹಿಂದಕ್ಕೆ ಪಡೆಯಲು ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಅರಸೀಕೆರೆ ಜೇನುಕಲ್ ಕ್ರೀಡಾಂಗಣ ಪೂರ್ಣಗೊಳಿಸುವ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೪೧ (೧೩೨೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಸೀಕೆರೆ ಪಟ್ಟಣದ ಜೇನುಕಲ್ ಕ್ರೀಡಾಂಗಣ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ; ಸದರಿ ಕ್ರೀಡಾಂಗಣದ ನಿರ್ಮಾಣಕ್ಕೆ

ಅಂದಾಜಿಸಲಾದ ಮೊಬಲಗೆಷ್ಟು ; ಪ್ರಸ್ತುತ ಸದರಿ ಕ್ರೀಡಾಂಗಣದ ಕಾಮಗಾರಿ ಯಾವ ಹಂತದಲ್ಲಿದೆ ;

(ಆ) ಈ ಕ್ರೀಡಾಂಗಣವನ್ನು ಪೂರ್ಣಗೊಳಿಸಲು ಅವಶ್ಯವಿರುವ ಮೊಬಲಗೆಷ್ಟು ; ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು ; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ;

(ಇ) ಅಪೂರ್ಣಗೊಂಡಿರುವ ಕ್ರೀಡಾಂಗಣ ಕಸದ ತೊಟ್ಟಿಯಾಗಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿರುವುದರಿಂದ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಣ್ಣ ನೀರಾವರಿ ಇಲಾಖೆಯಿಂದ ಬಿಡುಗಡೆಯಾಗುತ್ತಿರುವ ಅನುದಾನದ ಕುರಿತು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೪೨ (೧೩೨೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಮನಗರ ಜಿಲ್ಲೆಗೆ ಕಳೆದ ೩ ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು ; ಖರ್ಚು ಮಾಡಲಾದ ಮೊತ್ತವೆಷ್ಟು; ಖರ್ಚಾಗದೆ ಉಳಿದ ಮೊತ್ತವೆಷ್ಟು ; (ವರ್ಷವಾರು, ಲೆಕ್ಕಶೀರ್ಷಿಕೆವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಅನುದಾನದಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ ; (ಲೆಕ್ಕಶೀರ್ಷಿಕೆವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆಯೇ ; ಟೆಂಡರ್ ಪ್ರಕ್ರಿಯೆ ನಡೆಸುವಾಗ ಅನುಸರಿಸಲಾಗಿರುವ ಮಾನದಂಡಗಳೇನು ; (ವಿವರಗಳನ್ನು ನೀಡುವುದು)

(ಈ) ಈ ಕಾಮಗಾರಿಗಳನ್ನು ಯಾವ ಸಂಸ್ಥೆ/ಗುತ್ತಿಗೆದಾರರಿಗೆ ನೀಡಲಾಗಿದೆ ; (ಸಂಸ್ಥೆ/ಗುತ್ತಿಗೆದಾರರ ಹೆಸರು ವಿಳಾಸ ಸಹಿತ ಕಾಮಗಾರಿಗಳ ಪ್ರತ್ಯೇಕವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಯೋಜನೆಗಳಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಿಗೆ ಸರ್ಕಾರ ಕಾಲಮಿತಿಯನ್ನು ನಿಗಧಿಗೊಳಿಸಿದೆಯೇ ; ಹಾಗಿದ್ದಲ್ಲಿ, ನಿಗದಿಪಡಿಸಿರುವ ಕಾಲಮಿತಿ ಎಷ್ಟು ? (ವಿವರ ನೀಡುವುದು)

## ಕೆರೆಗಳ ಅಭಿವೃದ್ಧಿ ಕುರಿತು

**ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

೧೨೪೩ (೧೩೨೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯಲ್ಲಿರುವ ಕೆರೆಗಳ ಅಂತರಜಲ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಈ ಜಿಲ್ಲೆಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು; ಆ ಪೈಕಿ ಹೂಳೆತ್ತಲು ಬಾಕಿ ಇರುವ ಕೆರೆಗಳ ಸಂಖ್ಯೆ ಎಷ್ಟು ;

(ಇ) ಕಳೆದ ೨ ವರ್ಷಗಳಲ್ಲಿ ಎಷ್ಟು ಕೆರೆಗಳಲ್ಲಿ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ ;

(ಈ) ಈ ವರ್ಷ ಎಷ್ಟು ಕೆರೆಗಳಲ್ಲಿ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಳ್ಳಲು ಸರ್ಕಾರ ಉದ್ದೇಶಿಸಿದೆ ;

(ಉ) ಉದ್ದೇಶಿಸಿದ್ದಲ್ಲಿ ಬೆಳಗಾವಿ ಜಿಲ್ಲೆ ಕೆರೆಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿರುವ ಬೈತಖೋಲ ಬಂದರಿನಲ್ಲಿ ಗೋದಾಮಿನ ದುರಸ್ತಿ ಕಾರ್ಯ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೪೪ (೧೩೨೯) ಮಾನ್ಯ ಜವಳಿ ಮತ್ತು ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿರುವ ಬೈತಖೋಲ ಬಂದರಿನಲ್ಲಿನ ಗೋದಾಮಿನ ದುರಸ್ತಿ ಹಾಗೂ ಗ್ಯಾಲ್ ವಾಲಿಂ ಸಿಟ್ ಅಳವಡಿಕೆ ಕಾಮಗಾರಿಯು ನಿಗಧಿತ ಅವಧಿಯೊಳಗೆ ಪೂರ್ಣಗೊಂಡಿಲ್ಲದಿರುವ ಪ್ರಯುಕ್ತ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಂಬಂಧಿಸಿದ ಗುತ್ತಿಗೆದಾರನ ನಿರ್ಲಕ್ಷದಿಂದ ಹೊರ ದೇಶದಿಂದ ಆಮದಾಗುವ ಫಾಸ್ಫರಿಕ್ ಸಲ್ಫೇಟ್, ರಾಕ್ ಫಾಸ್ಫೇಟ್, ಮೆಕ್ಕೆಜೋಳ,

ಜೋಳ, ಯೂರಿಯಾ, ಗೋಧಿ, ಅಕ್ಕಿ, ಅಲ್ಯುಮಿನಿಯಂ ಪೌಡರ್ ಹಾಗೂ ಇನ್ನಿತರ ವಸ್ತುಗಳನ್ನು ಸಂರಕ್ಷಿಸಿಡಲು ಸೂಕ್ತ ಸ್ಥಳಾವಕಾಶದ ಕೊರತೆಯಿಂದಾಗಿ ಬಂದರಿಗೆ ಆಮದಾಗುವ ವಸ್ತುಗಳು ಸ್ಥಗಿತಗೊಳ್ಳುವಂತಾಗಿರುವುದು ನಿಜವಲ್ಲವೇ; ಈ ಎಲ್ಲಾ ನಷ್ಟಕ್ಕೆ ಯಾರು ಜವಾಬ್ದಾರರು; ಈ ರೀತಿ ನಿಷ್ಕಾಳಜಿ ಮಾಡಿರುವ ಗುತ್ತಿಗೆದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಹಾಗೂ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಮೈಸೂರಿನ ಫಾಲ್ಕನ್ ಟೈರ್ಸ್ ಕೈಗಾರಿಕೆಯ ಪುನರಾರಂಭ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೪೫ (೧೩೩೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರದಲ್ಲಿರುವ ಫಾಲ್ಕನ್ ಟೈರ್ ಸಂಸ್ಥೆಯನ್ನು ಪುನರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ ;

(ಆ) ಈ ಕೈಗಾರಿಕಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ ಎಷ್ಟು; ಈ ಕೈಗಾರಿಕೆಯನ್ನು ಮುಚ್ಚಲು ಕಾರಣಗಳೇನು ; (ವಿವರ ಒದಗಿಸುವುದು)

(ಇ) ಈ ಕೈಗಾರಿಕೆಯ ಪುನರಾರಂಭಕ್ಕೆ ಸಂಧಾನ ಸಭೆಗಳನ್ನು ನಡೆಸಲಾಗಿದೆಯೇ; ಅವುಗಳ ಫಲಶ್ರುತಿ ಏನು; ಯಾವಾಗಿನಿಂದ ಈ ಕಾರ್ಖಾನೆಯನ್ನು ಆರಂಭಿಸಲಾಗುವುದು ? (ವಿವರ ಒದಗಿಸುವುದು)

## ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಿಸುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೪೬ (೧೩೩೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪರಿಸರ ಸಂರಕ್ಷಣೆ ಮತ್ತು ಪ್ರಾಣಿಗಳ ಜೀವ ಸಂರಕ್ಷಣೆ ದೃಷ್ಟಿಯಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಲು ಆದೇಶ ಹೊರಡಿಸಲಾಗುವುದೇ ;

(ಆ) ಪ್ರವಾಸಿಗರು ರಾಷ್ಟ್ರೀಯ ಉದ್ಯಾನವನದಲ್ಲಿ ಪ್ಲಾಸ್ಟಿಕ್ ತಟ್ಟೆ, ಲೋಟ, ಕವರ್ ಇತ್ಯಾದಿಗಳನ್ನು ಬೀಸಾಡುತ್ತಿದ್ದು, ಇದರಿಂದ ಪ್ರಾಣಿಗಳ ಜೀವಕ್ಕೆ ಮತ್ತು ಪರಿಸರಕ್ಕೆ ಹಾನಿಯಾಗುವ ಸಂಭವ ಇದ್ದು, ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಪ್ಲಾಸ್ಟಿಕ್ ನಿಷೇಧಿಸಿರುವಂತೆ ಇಲ್ಲಿಯೂ ಕೂಡಾ ಪ್ಲಾಸ್ಟಿಕ್ ಬಳಕೆಗೆ ನಿಷೇಧ ಹೇರಲು ಕ್ರಮ ತೆಗೆದುಕೊಳ್ಳಲಾಗುವುದೇ ?

## "ಹಿರಿಯನಾಗರಿಕರಿಗೆ" ಪಿಂಚಣಿ ನೀಡುವಲ್ಲಿ ವಿಳಂಬ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೪೭ (೧೩೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ೬೦ ರಿಂದ ೬೫ ವರ್ಷ ತುಂಬಿದ ಹಿರಿಯ ನಾಗರೀಕರಿಗೆ ಪಿಂಚಣಿಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಹಿರಿಯ ನಾಗರೀಕರಿಗೆ ನೀಡುತ್ತಿರುವ ಪಿಂಚಣಿ ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರದ ಕ್ರಮವೇನು ;

(ಇ) ಬಂದಿದ್ದಲ್ಲಿ, ಪಿಂಚಣಿಯನ್ನು ಕಂದಾಯ ಇಲಾಖೆಯ ಸಿಬ್ಬಂದಿಗಳಲ್ಲಿ ಪ್ರತಿ ತಿಂಗಳು ೦೫ನೇ ತಾರೀಖಿನೊಳಗೆ ಹಿರಿಯ ನಾಗರೀಕರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಪಿಂಚಣಿಯನ್ನು ಸರಿಯಾಗಿ ನೀಡದೆ ಇರಲು ಕಾರಣಗಳೇನು; ಹಾಗೇ ರಾಜ್ಯದಲ್ಲಿ ಒಟ್ಟು ಎಷ್ಟು ಜನ ಹಿರಿಯ ನಾಗರೀಕರಿಗೆ ಪಿಂಚಣಿಯನ್ನು ನೀಡಲಾಗುತ್ತಿದೆ ? (ಹಿರಿಯ ನಾಗರೀಕರ ಹೆಸರು, ವಿಳಾಸವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

## ಜಾತಿ ಪ್ರಮಾಣ ಪತ್ರ ನೀಡುವಲ್ಲಿ ವಿನಾಕಾರಣ ತೊಂದರೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೪೮ (೧೩೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಜಾತಿ ಪ್ರಮಾಣ ಪತ್ರ ವಿತರಿಸುವಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೂಡಲೇ ಜಾತಿ ಪ್ರಮಾಣ ಪತ್ರ ವಿತರಿಸುವುದರಿಂದ ಮಕ್ಕಳ ಶೈಕ್ಷಣಿಕ ದಾಖಲಾತಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು ;

(ಇ) ಈ ವಿಳಂಬಕ್ಕೆ ಯಾವ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಕ್ರಮ ಜರುಗಿಸುವುದು ? (ವಿವರ ನೀಡುವುದು)

## ಅರಣ್ಯ ಭೂಮಿ ಒತ್ತುವರಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೪೯ (೧೩೩೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಒಟ್ಟು ಅರಣ್ಯ ಭೂಮಿ ಎಷ್ಟು ;

(ಆ) ಆ ಪೈಕಿ ಒತ್ತುವರಿಯಾಗಿರುವ ಅರಣ್ಯ ಎಷ್ಟು ; (ತಾಲ್ಲೂಕು ಮತ್ತು ಗ್ರಾಮಗಳವಾರು ವಿವರ ನೀಡುವುದು)

(ಇ) ಅರಣ್ಯ ಪ್ರದೇಶಗಳ ಗಡಿಹಾಳು ಮಾಡಿ ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅರಣ್ಯ ಗಡಿ ಕಾಪಾಡಲು ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡವರಿಂದ ಮರಳಿ ಪಡೆಯಲು ಸರ್ಕಾರವು ಅನುಸರಿಸಲಿರುವ ಮಾನದಂಡಗಳು ಯಾವುವು ?

## ವಿಶೇಷ ಘಟಕ ಯೋಜನೆಯ ಅನುದಾನ ಅಸಮರ್ಪಕ ಬಳಕೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೫೦ (೧೩೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೧–೧೨ ರಿಂದ ೨೦೧೫–೧೬ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ವಿವಿಧ ಯೋಜನೆಗಳಿಗೆ ಸರ್ಕಾರದಿಂದ ಮಂಜೂರಾದ ಹಣವೆಷ್ಟು ; ಖರ್ಚು ಮಾಡಿದ ಹಣವೆಷ್ಟು; ಉಳಿದ ಹಣವೆಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಆ) ವಿಶೇಷ ಘಟಕ ಯೋಜನೆಯಡಿಯಲ್ಲಿ ಹಣ ಉಳಿಯಲು ಕಾರಣಗಳೇನು ; (ವಿವರ ಒದಗಿಸುವುದು)

(ಇ) ಜಿಲ್ಲಾಧಿಕಾರಿಗಳ ಕಛೇರಿಯ ಸಿಬ್ಬಂದಿಯ ನಿರ್ಲಕ್ಷ್ಯತನದಿಂದ ಸರ್ಕಾರದಿಂದ ಮಂಜೂರಾದ ಅನುದಾನ ಬಳಕೆಯಾಗದೆ ಮರಳಿ ಸರ್ಕಾರಕ್ಕೆ ವಾಪಸಾಗುತ್ತಿದ್ದು ಇದಕ್ಕೆ ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದರೆ ಇಲ್ಲಿಯವರೆಗೆ ಯಾವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು)

F-2 B/B

## ಅನಧಿಕೃತವಾಗಿ ಸರ್ವೆ ನಂ.೨ರ ಜಮೀನನ್ನು ರುದ್ರ ಭೂಮಿಯಾಗಿ ಬಳಸುತ್ತಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೫೧ (೧೩೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಕೌರಾಮಿ ಗ್ರಾಮದ ಸರ್ವೆ ನಂ.೨ರ ಜಮೀನು ಯಾರ ಒಡತನದಲ್ಲಿದೆ;

(ಆ) ಹಾಗಿದ್ದಲ್ಲಿ, ಸರ್ವೆ ನಂ.೨ರ ಜಮೀನಿಗೆ ಭೂಮಾಲೀಕರು ತಹಶೀಲ್ದಾರರವರಿಗೆ ದೂರು ಕೊಟ್ಟರು ಯಾವುದೇ ಕ್ರಮಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಸರ್ವೆ ನಂ.೨ರ ಜಮೀನಿನಲ್ಲಿ ಗ್ರಾಮದ ಜನರು ಅನಧಿಕೃತವಾಗಿ ರುದ್ರಭೂಮಿಯಾಗಿ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

## ಬಹುಕೌಶಲ್ಯ ತರಬೇತಿ ನೀಡಲು ಪ್ರಾರಂಭಿಸಲಾದ ಕೆ.ಜಿ.ಟಿ.ಟಿ.ಐ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-**

೧೨೫೨ (೧೭೨೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಹುಕೌಶಲ್ಯ ತರಬೇತಿ ನೀಡುವ ಉದ್ದೇಶವಿಟ್ಟುಕೊಂಡ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಗಳು (ಕೆ.ಜಿ.ಟಿ.ಟಿ.ಐ)

ರಾಜ್ಯದಲ್ಲಿ ಪ್ರಸ್ತುತ ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ; ಇಲ್ಲಿ ವಿದ್ಯಾರ್ಥಿಗಳಿಗೆ ನೀಡಲಾದ ಬಹುಕೌಶಲ್ಯ ತರಬೇತಿಯ ಸಂಪೂರ್ಣ ವಿವರ ನೀಡುವುದು)

(ಆ) ಜರ್ಮನ್ ತಾಂತ್ರಿಕ ನೆರವು ಪಡೆಯಲು ಸರ್ಕಾರವು ಪಾವತಿಸಲಾದ ಹಣದ ಮೊತ್ತವೆಷ್ಟು; ಹಾಗೂ ಪಡೆದ ತಾಂತ್ರಿಕ ನೆರವಿನ ಸಂಪೂರ್ಣ ವಿವರಗಳನ್ನು ಒದಗಿಸುವುದು;

(ಇ) ಕೆ.ಜಿ.ಟಿ.ಟಿ.ಐ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗ ಮತ್ತು ತರಬೇತಿ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಯಾರ್ಯಾರು; ಕೆ.ಜಿ.ಟಿ.ಟಿ.ಐ ಯಿಂದ ಇವರಿಗೆ ಮಾಸಿಕ ಎಷ್ಟು ಸಂಬಳ ನೀಡಲಾಗುತ್ತಿದೆ; ಇಲ್ಲಿಯವರೆಗೆ ಸದರಿಯವರುಗಳಿಗೆ ನೀಡಲಾದ ಮಾಹೆಯವಾರು ಸಂಬಳದ ವಿವರ ಹಾಗೂ ಇವರಿಗೆ ವಹಿಸಲಾದ ಜವಾಬ್ದಾರಿ ಮತ್ತು ಸದರಿ ಹುದ್ದೆ ವಹಿಸಿಕೊಂಡಾಗಿನಿಂದ ಇಲ್ಲಿಯವರೆಗಿನ ಇವರ ಸಾಧನೆಯ ವಿವರ ಹಾಗೂ ದಿನಚರಿಯ ಅನುಮೋದಿತ ಪ್ರತಿಗಳನ್ನು ಒದಗಿಸುವುದು;

(ಈ) ಕೆ.ಜಿ.ಟಿ.ಟಿ.ಐ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೇ ಎಲ್ಲ ಸಿಬ್ಬಂದಿಯವರ ವಿವರಗಳು ಹಾಗೂ ಅವರುಗಳಿಗೆ ನೀಡಲಾಗುತ್ತಿರುವ ಮಾಸಿಕ ಸಂಬಳದ ಮಾಹೆಯವಾರು ವಿವರಗಳು, ವಹಿಸಲಾದ ಜವಾಬ್ದಾರಿಗಳ ವಿವರಗಳನ್ನು ಒದಗಿಸುವುದು?

## ಮಂಡ್ಯ ಜಿಲ್ಲೆ ಕೆರಗೋಡು ಹೋಬಳಿ ಚಿಕ್ಕಬಳ್ಳಿ ಕೆರೆ ಪಿಕಪ್ ನಾಲೆ ದುರಸ್ಥಿ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-**

೧೨೫೩ (೧೬೯೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆ ಕೆರೆಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿಗೆ ಕಾರ್ಯಾದೇಶ ನೀಡಿದ್ದು ಯಾವಾಗ; ಕಾಮಗಾರಿ ಪೂರ್ಣಗೊಳಿಸಲು ನೀಡಿದ್ದ ಅವಧಿ ಎಷ್ಟು;

(ಆ) ಕಾಮಗಾರಿ ವಿಳಂಬಗೊಳ್ಳಲು ಕಾರಣವೇನು ಹಾಗೂ ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

(ಇ) ಕೆರೆಗೋಡು ಶಾಖಾ ನಾಲೆ (ವಿ.ಸಿ. ನಾಲೆ) ಸರಪಳಿ ೨೨.೪೦೦೦ ಕಿ.ಮೀ ನಲ್ಲಿ ೨೦ನೇ ವಿತರಣಾ ನಾಲೆ ತೂಬಿನಿಂದ ಬರುವ ನೀರು ಚಿಕ್ಕಬಳ್ಳಿ ಪಿಕಪ್ ನಾಲೆಯ ಸರಪಳಿ ೧೧.೮೭೫ ಕಿ.ಮೀ ನಲ್ಲಿ ಹರಿಸಲಾಗುತ್ತಿದ್ದು, ಈ ನೀರು ಗೂಳೂರು ಬೆಟ್ಟದ ಬಳಿ ಚಿಕ್ಕಬಳ್ಳಿ ಪಿಕಪ್ ನಾಲೆಯು ಬೆಟ್ಟವನ್ನು ಬಳಸಿಕೊಂಡು ಹರಿಯುತ್ತಿರುವ ಹಿನ್ನೆಲೆಯಲ್ಲಿ ನಿಗದಿತ ಪ್ರಮಾಣದ ನೀರು ತುದಿ ಹಂತಕ್ಕೆ ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿ ಅಂದಾಜಿನಲ್ಲಿ ೧೫೦ ಮೀ ಉದ್ದದ ಸದರಿ ಮೇಲ್ಗಾಲುವೆಯನ್ನು ನಿರ್ಮಾಣ ಮಾಡಲು ಅವಕಾಶ ಕಲ್ಪಿಸದೇ ಇರುವುದು ನಿಜವೇ; ಹಾಗಿದ್ದಲ್ಲಿ ೧೫೦ ಮಿ. ಉದ್ದ ಮೇಲ್ಗಾಲುವೆಯನ್ನು ನಿರ್ಮಾಣ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

## ಕಾರ್ಮಿಕ ಗುತ್ತಿಗೆದಾರರ ವಂಚನೆ.

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):-**

೧೨೫೪ (೧೬೭೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಹೊರಸಂಪನ್ಮೂಲಗಳಿಂದ ಸಿಬ್ಬಂದಿ/ಕಾರ್ಮಿಕರನ್ನು ಸರಬರಾಜು ಮಾಡುವ ಕಾರ್ಮಿಕ ಗುತ್ತಿಗೆದಾರರು ಯಾರು ಯಾರು; ಇವರು ನೌಕರರಿಗಾಗಿ ಸಂಗ್ರಹಿಸಿದಷ್ಟು ವೇತನವನ್ನು ಸಿಬ್ಬಂದಿ/ಕಾರ್ಮಿಕರಿಗೆ ನೀಡದೆ ESI/PF ವಂತಿಕೆಗಳನ್ನು ಸಂಬಂದಪಟ್ಟ ಪ್ರಾದಿಕಾರಗಳಿಗೆ ಪಾವತಿಸದೆ ವಂಚಿಸಿರುವ ಎಷ್ಟು ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿದೆ; ಮತ್ತು ಇಲಾಖೆಯೇ ನೇರವಾಗಿ ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಿದೆ; (ಕಳೆದ ೨ ವರ್ಷಗಳ ಪೂರ್ಣ ವಿವರ ನೀಡುವುದು)

(ಆ) ವಂಚನೆ ಮಾಡುತ್ತಿರುವ ಎಷ್ಟು ಕಾರ್ಮಿಕ ಗುತ್ತಿಗೆದಾರರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆ; (ವಿವರಗಳನ್ನು ನೀಡುವುದು)

(ಇ) ಕಾರ್ಮಿಕ ಗುತ್ತಿಗೆದಾರರು ನಿರಂತರವಾಗಿ ಎಸಗುತ್ತಿರುವ ಇಂತಹ ವಂಚನೆಗಳನ್ನು ಖಾಯಂ ಆಗಿ ತಡೆಗಟ್ಟಲು ಸರ್ಕಾರ ಮಾಡಿರುವ ಚಿಂತನೆಗಳೇನು;

(ಈ) ರಾಜ್ಯದ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ದುಡಿಯುತ್ತಿರುವ ಮಹಿಳಾ ಉದ್ಯೋಗಿಗಳಿಗೆ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸುವ ಭರವಸೆಯನ್ನು ಸರ್ಕಾರ ನೀಡಿದ್ದು ಈ ಭರವಸೆ ಯಾವ ಅವಧಿ ಒಳಗೆ ಈಡೇರಲಿದೆ?

## ITI ಕಾಲೇಜುಗಳ ಹಾಗೂ ಸಿಬ್ಬಂದಿಗಳ ಕುರಿತು.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) :-**

೧೨೫೫ (೧೬೮೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ITI ಕಾಲೇಜುಗಳ ಸಂಖ್ಯೆ ಎಷ್ಟು;

(ಆ) ಸದರಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿಷಯವಾರು, ಅವರ ಹೆಸರು, ವಿಳಾಸ ಸಂಪೂರ್ಣ ವಿವರ ನೀಡುವುದು) (ಬೋಧಕ/ಬೋಧಕೇತರರ, ಶಾಲಾ ಕಾಲೇಜುಗಳ ವಿಳಾಸ ಸಂಪೂರ್ಣ ವಿವರ ನೀಡುವುದು)

## ESI ರೋಗಿಗಳ ಖಾಸಗಿ ಆಸ್ಪತ್ರೆ ಚಿಕಿತ್ಸೆಗೆ ಅನುಮತಿ ನೀಡುವುದು

**ಶ್ರೀ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೬ (೧೬೮೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ESI ರೋಗಿಗಳು ಚಿಕಿತ್ಸೆ ಪಡೆಯಲು ಅನುಮತಿ ಕೊಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಆ ಆಸ್ಪತ್ರೆಗಳಿಗೆ ಕೊಡಬೇಕಾದ ಬಾಕಿ ಹಣ ಎಷ್ಟು;

(ಇ) ಎಷ್ಟು ದಿನಗಳಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆ ಹಣ ನೀಡಲಾಗುತ್ತಿದೆ; ವಿಳಂಬವಾಗುತ್ತಿದ್ದರೆ ಕಾರಣಗಳೇನು; ಅದರಿಂದ ಆಸ್ಪತ್ರೆಗಳು ಚಿಕಿತ್ಸೆಯಲ್ಲಿ ನಿರಾಸಕ್ತಿವ್ಯಕ್ತವಾಗಿದ್ದು ಸರ್ಕಾರ ಬಂದಿದೆಯೆ?

## ಎತ್ತಿನ ಹೊಳೆ ಮೇಕೆದಾಟು ಯೋಜನೆಯಿಂದ ಕುಡಿಯುವ ನೀರು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :-**

೧೨೫೭ (೧೬೮೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಎತ್ತಿನ ಹೊಳೆ ಮತ್ತು ಮೇಕೆದಾಟು ಕುಡಿಯುವ ನೀರು ಯೋಜನೆಗಳ DPR ಸಿದ್ಧಪಡಿಸಲು ಯಾವ ಯಾವ ಸಂಸ್ಥೆಗಳಿಗೆ ಸರ್ಕಾರ ಕಾರ್ಯಾದೇಶ ನೀಡಿದೆ; ಈ ಸಂಸ್ಥೆಗಳ Credibility ಬಗ್ಗೆ ವಿವರಗಳನ್ನು ಒದಗಿಸುವುದು;

(ಆ) ಆ DPR ವರದಿಗಳನ್ನು ಪಡೆಯಲು ನೀಡಲಿರುವ ಒಟ್ಟು ಹಣವೆಷ್ಟು; ಆ ಪೈಕಿ ಈವರೆಗೆ ಎಷ್ಟು ಹಣ ನೀಡಲಾಗಿದೆ; ಕಾಮಗಾರಿಯ ಪ್ರಗತಿ ಎಷ್ಟಾಗಿದೆ;

(ಇ) ಈ DPR ಕಾರ್ಯಗಳನ್ನು ಹಾಲಿ ನೀರಾವರಿ ಅಥವಾ ಲೋಕೋಪಯೋಗಿ ಅಥವಾ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿರುವ ಮುಖ್ಯ ಇಂಜಿನಿಯರುಗಳಿಂದ ಅಥವಾ ಕೆಳಹಂತದ ಇಂಜಿನಿಯರ್‌ಗಳಿಂದ ಮಾಡಿಸಲು ಸರ್ಕಾರಕ್ಕೆ ಸಾಧ್ಯವಿರಲಿಲ್ಲವೇ; ಇಲ್ಲದಿರಲು ಕಾರಣಗಳನ್ನು ನೀಡುವುದು;

(ಈ) ಸರ್ಕಾರದ ವೆಚ್ಚಕ್ಕೆ ಕಡಿವಾಣ ಹಾಕಲು ಅಥವಾ ವೆಚ್ಚವನ್ನು ಉಳಿತಾಯ ಮಾಡಲು, ಯಾವುದೇ DPR ಗಳನ್ನು ಸರ್ಕಾರದ ಮುಖ್ಯ ಇಂಜಿನಿಯರ್‌ಗಳಿಂದ ಮಾಡಿಸಲು ಸರ್ಕಾರ ಮುಂದಿನ ದಿನಗಳಲ್ಲಿ ಚಿಂತಿಸುವುದೇ?

## ವಿನಾಶದ ಅಂಚಿನಲ್ಲಿರುವ ಚಿಪ್ಪು ಹಂದಿ (ಪೆಂಗೋಲಿಯನ್) ಪ್ರಾಣಿಯನ್ನು ಸಂರಕ್ಷಿಸುವ ಸಲುವಾಗಿ "ಅರಣ್ಯಧಾಮ" ಸ್ಥಾಪಿಸುವುದು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೨೫೮ (೧೬೮೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿನಾಶದ ಅಂಚಿನಲ್ಲಿರುವ ಪ್ರಾಣಿಸಂಕುಲದ ಸಾಲಿಗೆ ಚಿಪ್ಪು ಹಂದಿಯೂ ಸೇರುತ್ತಿರುವುದು ನಿಜವೇ; ಚಿಪ್ಪು ಹಂದಿ

(ಪೆಂಗೋಲಿಯನ್) ಪ್ರಾಣಿಯನ್ನು ಬೇಟೆಯಾಡಲು ಕಾರಣಗಳೇನು;

(ಆ) ವನ್ಯಜೀವಿ ಸಂರಕ್ಷಣಾ ಕಾಯಿದೆ ಶೆಡ್ಯೂಲ್ ೧ರಲ್ಲಿ ಈ ಪ್ರಾಣಿಯೂ ಸೇರುತ್ತದೆಯೇ; ಸದರಿ ಕಾಯಿದೆಯ ಬಗ್ಗೆ ವಿವರ ನೀಡುವುದು;

(ಇ) ಪೆಂಗೋಲಿಯನ್ ಪ್ರಾಣಿಯೂ ರಾಜ್ಯದ ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತದೆ;

(ಈ) ಈ ಪ್ರಾಣಿಯನ್ನು ಸಂರಕ್ಷಿಸಲು "ಪೆಂಗೋಲಿಯನ್ ಅರಣ್ಯಧಾಮ" ಮಾಡಲು ಸರ್ಕಾರ ಮುಂದಾಗುವುದೆ; ಇಲ್ಲವಾದಲ್ಲಿ ಕಾರಣವೇನು?

## ದಾಂಡೇಲಿ-ಅಣಶಿ ಹುಲಿ ಸಂರಕ್ಷಿತ ಪ್ರದೇಶದಲ್ಲಿನ ರಾಜ್ಯ ಹೆದ್ದಾರಿಯಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿಷೇಧಿಸಿ, ವನ್ಯಜೀವಿಗಳನ್ನು ಸಂರಕ್ಷಿಸುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೨೫೯ (೧೬೮೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಾಂಡೇಲಿ-ಅಣಶಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗುವ ಸದಾಶಿವನಗಡ-ಔರಾದ್ ರಾಜ್ಯ ಹೆದ್ದಾರಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಾಹನ ಸಂಚಾರದಿಂದಾಗಿ ಸತ್ತ ಪ್ರಾಣಿಗಳು, ಸರಿಸೃಪಗಳು, ಕಾಳಿಂಗ ಸರ್ಪಗಳೆಷ್ಟು; (ಅವುಗಳ ಪೂರ್ಣ ವಿವರ ನೀಡುವುದು)

(ಆ) ಈ ಸಂಬಂಧ ಎಷ್ಟು ವಾಹನಗಳಿಗೆ ದಂಡ ವಿಧಿಸಲಾಗಿದೆ;

(ಇ) ವನ್ಯ ಜೀವಿಗಳನ್ನು ಸಂರಕ್ಷಿಸುವ ಸಂಬಂಧ, ರಾತ್ರಿವೇಳೆ ವಾಹನ ಸಂಚಾರ ನಿಷೇಧಿಸಲು ಸಾಧ್ಯವಿಲ್ಲವೇ; ಇದಕ್ಕೆ ಪರ್ಯಾಯವಾಗಿ ಬದಲಿ ರಸ್ತೆ ಇರುವುದು ನಿಜವೇ; ರಾತ್ರಿವೇಳೆ ಬದಲಿ ರಸ್ತೆಯಲ್ಲಿ ವಾಹನಗಳು ಸಂಚರಿಸುವಂತೆ ಕಾನೂನು ಮಾಡಲು ಸರ್ಕಾರ ಮುಂದಾಗುವುದೇ;

(ಈ) ಇಲ್ಲವಾದಲ್ಲಿ ಕಾರಣಗಳೇನು?

## ಅರಣ್ಯ ಭೂಒತ್ತುವರಿಯನ್ನು ಸಕ್ರಮ ಮಾಡಿಕೊಟ್ಟವರ ದಾಖಲೆಗಳಲ್ಲಿ ಇನ್ನೂ "ಅರಣ್ಯ" ಎಂದೇ ನಮೂದಾಗಿದ್ದು ತುರ್ತು ಸರಿಪಡಿಸಿ ಕೊಡುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೨೬೦ (೧೬೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಎರಡು ವರ್ಷಗಳಲ್ಲಿ ಅರಣ್ಯ ಭೂಒತ್ತುವರಿ ಮಾಡಿಕೊಂಡವರಿಗೆ ಪುನರ್ ವಸತಿ ಮತ್ತು ಪ್ಯಾಕೇಜ್ ನೀಡುವ ಮೂಲಕ ಎಷ್ಟು ಎಕರೆಯಷ್ಟು ಅರಣ್ಯ ಭೂಮಿಯನ್ನು ಸರ್ಕಾರವು ಸ್ವಾಧೀನ ಪಡಿಸಿಕೊಂಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕೆಲವರ ಭೂಮಿಯನ್ನು ಸಕ್ರಮ ಮಾಡಿಕೊಟ್ಟಿದ್ದರೂ, ಸಾಗುವಳಿ ಚೀಟಿ ಇದ್ದವರ ಜಮೀನು ದಾಖಲೆಯಲ್ಲಿ ಇನ್ನು "ಅರಣ್ಯ" ಎಂದೇ ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಇದನ್ನು ಸಂಪೂರ್ಣ ಸರಿಪಡಿಸಲು ಜರೂರು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ; ಇದಕ್ಕೆ ಬೇಕಾಗಿರುವ ಕಾಲಾವಧೀ ಏನು?

## ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರ ಜಮೀನುಗಳಿಗೆ ಸಕ್ರಮ ಭಾಗ್ಯ ದೊರಕಿಸುವಲ್ಲಿ ಆಗುತ್ತಿರುವ ವಿಳಂಬವನ್ನು ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೨೬೧ (೧೬೯೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಗರ್ ಹುಕುಂ ಸಮಿತಿಗಳನ್ನು ರಚನೆ ಮಾಡಲು ಆದೇಶ ಹೊರಡಿಸಿರುವುದು ನಿಜವೇ; ಯಾವಾಗ ಆದೇಶ ಹೊರಡಿಸಲಾಯಿತು;

(ಆ) ಇದುವರೆವಿಗೂ ಯಾವ ಯಾವ ಕ್ಷೇತ್ರಗಳಲ್ಲಿ ಇನ್ನು ಸಮಿತಿಯು ರಚನೆಯಾಗಿರುವುದಿಲ್ಲ;

(ಇ) ಈ ಸಮಿತಿಯ ಕಾರ್ಯವೇನು; ಇದುವರೆವಿಗೂ ಬಗರ್ ಹುಕುಂ ಸಾಗುವಳಿ ಸಮಿತಿ ಸಭೆ ನಡೆಸಿರದ ಸಮಿತಿಗಳು ಯಾವುವು;

(ಈ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರ ಸಂಖ್ಯೆ ಎಷ್ಟು; ಜಮೀನಿನ ವಿಸ್ತೀರ್ಣವೆಷ್ಟು; ಇವರಿಗೆ ಸಕ್ರಮ ಭಾಗ್ಯ ದೊರಕಿಸಲು ತೆಗೆದುಕೊಳ್ಳಬಹುದಾದ ಕ್ರಮಗಳೇನು?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬಾಲ ಕಾರ್ಮಿಕರು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೬೨ (೧೬೮೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಅತಿಹೆಚ್ಚಾಗಿ ಬಾಲ ಕಾರ್ಮಿಕರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಕಾರ್ಮಿಕರನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಈ ಬಾಲ ಕಾರ್ಮಿಕರು ಯಾರು; ದುಡಿಮೆಗೆ ಬಳಸಿಕೊಳ್ಳುತ್ತಿರುವವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

## ಕಂದಾಯ ಇಲಾಖೆಯಲ್ಲಿ RTC ಗ್ರಾಮ ಮಟ್ಟದಲ್ಲಿ ವಿತರಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೬೩ (೧೬೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಂದಾಯ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ ಹಾಗೂ ಯೋಜನೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು)

(ಆ) ನಾಡ ಕಛೇರಿಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

(ಇ) ಗ್ರಾಮ ಕರಣೀಕರ ಕಛೇರಿಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಹಾಗೂ ಗ್ರಾಮ ಮಟ್ಟದಲ್ಲಿ RTC ವಿತರಿಸುವ ಬಗ್ಗೆ ಸರ್ಕಾರದ ಯೋಚನೆ, ಯೋಜನೆಗಳೇನು; (ವಿವರ ನೀಡುವುದು)

(ಈ) ಕಂದಾಯ ಇಲಾಖೆಯ ಕೆಲವು ಕಾರ್ಯಕ್ರಮಗಳಿಗೆ ಗ್ರಾಮ ಪಂಚಾಯತ್ ಸಿಬ್ಬಂದಿಗಳನ್ನು, ಅಧಿಕಾರಿಗಳನ್ನು ಬಳಸಿಕೊಳ್ಳಲು ಕಾರಣಗಳೇನು;

(ಉ) ಕಂದಾಯ ಇಲಾಖೆಯ ಕಾರ್ಯಕ್ರಮಗಳನ್ನು ಯಶಸ್ವಿ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

## ಗ್ರಾಮ ಕರಣೀಕರ ಕಛೇರಿಯ ದುಸ್ಥಿತಿ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೬೪ (೧೬೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಂದಾಯ ಇಲಾಖೆಯ ಗ್ರಾಮ ಕರಣೀಕರ ಕಛೇರಿ, ನಾಡ ಕಛೇರಿಗಳಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಹಾಗೂ ಇರುವ ಕಟ್ಟಡಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮ ಕರಣೀಕರ ಕಛೇರಿ ಮತ್ತು ನಾಡ ಕಛೇರಿಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ; ಇರುವ ಕಟ್ಟಡಗಳು ಸುಸ್ಥಿತಿಯಲ್ಲಿವೆಯೆ; ಎಷ್ಟು ಕಛೇರಿಗಳಲ್ಲಿ ಶೌಚಾಲಯ ಹಾಗೂ ವಿದ್ಯುತ್ ಸಂಪರ್ಕ ಇದೆ;

(ಇ) ಗ್ರಾಮೀಣ ಜನರಿಗೆ ಸೇವೆ ನೀಡುವ ಗ್ರಾಮ ಕರಣೀಕರ ಕಛೇರಿ ಹಾಗೂ ನಾಡ ಕಛೇರಿಗಳನ್ನು ಸ್ಥಾಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ಸಂಪೂರ್ಣ ವಿವರ ನೀಡುವುದು)

## ಕಂದಾಯ ಅದಾಲತ್ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೬೫ (೧೭೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ೧ ವರ್ಷದಲ್ಲಿ ನಡೆದ ಕಂದಾಯ ಅದಾಲತ್‌ಗಳು ಎಷ್ಟು ; (ತಾಲ್ಲೂಕುವಾರು, ಹೋಬಳಿವಾರು ವಿವರ ನಿಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಸಿದ "ಪಹಣಿ ತಿದ್ದುಪಡಿ ಅದಾಲತ್"ಗಳ ಸಂಖ್ಯೆ ಎಷ್ಟು ; ಸ್ವೀಕರಿಸಿದ ಮತ್ತು ವಿಲೇವಾರಿ ಮಾಡಲಾದ ಪ್ರಕರಣಗಳು ಎಷ್ಟು; (ಹೋಬಳಿವಾರು ತಾಲ್ಲೂಕುವಾರು ವಿವರ ನಿಡುವುದು)

(ಇ) ಪಹಣಿ ಪತ್ರಿಕೆಗಳ ತಿದ್ದುಪಡಿ ಮತ್ತು ಈ ಸಂಬಂಧ ಉಪ ವಿಭಾಗಾಧಿಕಾರಿಗಳಿಗೆ ಸಲ್ಲಿಸುವ ಮೇಲ್ಮನವಿ ಪ್ರಕರಣಗಳು ಅತಿ

ವಿಳಂಬವಾಗಿ ವಿಲೇವಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನಿಡುವುದು)

## ಕಂದಾಯ ಇಲಾಖೆಯ ಖಾಲಿ ಹುದ್ದೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೬೬ (೧೬೯೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನಿಡುವುದು)

(ಆ) ತಹಶೀಲ್ದಾರರ ನೇರ ನೇಮಕಾತಿ ಪ್ರಸ್ತಾವನೆ ಯಾವ ಹಂತದಲ್ಲಿದೆ; ಯಾವಾಗ ನೇಮಕಾತಿ ಪ್ರಾರಂಭಿಸಲಾಗುವುದು;

(ಇ) ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಕಂದಾಯ ಸಹಾಯಕರ ಸಂಖ್ಯೆ ಎಷ್ಟು ; ಅವರಿಗೆ ನೀಡುತ್ತಿರುವ ವೇತನ ಎಷ್ಟು ;

(ಈ) ಕಂದಾಯ ಸಹಾಯಕರುಗಳಿಗೆ ವೇತನ ಪರಿಷ್ಕೃತಗೊಳಿಸಿ ಹೆಚ್ಚಿಸುವುದು, ಇ.ಎಸ್.ಐ. ಪಿ.ಎಫ್. ರಜಾ ಸೌಲಭ್ಯ ಒದಗಿಸುವುದು ಮತ್ತು ಸದರಿಯವರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದ ನಿಲುವು ಮತ್ತು ಕೈಗೊಳ್ಳುವ ಕ್ರಮಗಳೇನು ?

## ರಾಜ್ಯದಲ್ಲಿ ಒತ್ತುವರಿಯಾಗಿರುವ ಕೆರೆಗಳು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೬೭ (೧೬೯೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೆರೆಗಳ ಒತ್ತುವರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಒತ್ತುವರಿ ಆಗಿವೆ ; (ವಿವರ ನಿಡುವುದು)

(ಇ) ರಾಜ್ಯದಲ್ಲಿ ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಮುಖ್ಯವಾಗಿ ಮಾಗಡಿ ತಾಲ್ಲೂಕಿನಲ್ಲಿ ಅಂತಹ ಒತ್ತುವರಿಯಾದ ಕೆರೆಗಳನ್ನು ತೆರವುಗೊಳಿಸಲಾಗಿದೆಯೇ ? (ಪೂರ್ಣ ವಿವರ ನಿಡುವುದು)

## ಶ್ರೀಗಂಧ ಬೆಳೆಗಾರರ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–**

೧೨೬೮ (೧೬೯೯) ಮಾನ್ಯ ಸಣ್ಣ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಶ್ರೀಗಂಧ ಬೆಳೆಗಾರರ ಸಂಖ್ಯೆ ಎಷ್ಟು;

(ಆ) ಶ್ರೀಗಂಧ ಬೆಳೆಯುವವರಿಗೆ ಸರ್ಕಾರ ಕೊಡುವ ಸವಲತ್ತುಗಳೇನು;

(ಇ) ಈ ಶ್ರೀಗಂಧವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಇದೆಯೇ;

(ಈ) ಈಗಿನ ಮಾರುಕಟ್ಟೆ ದರದಲ್ಲಿ ರಾಜ್ಯದಲ್ಲಿ ಬೆಳೆದು ನಿಂತಿರುವ ಶ್ರೀಗಂಧದ ಮೌಲ್ಯ ಎಷ್ಟು ; ಶ್ರೀಗಂಧ ಕಳ್ಳತನ ಪ್ರಕರಣಗಳು ಎಷ್ಟು ದಾಖಲಾಗಿವೆ ;

(ಉ) ಶ್ರೀಗಂಧ ಕಳ್ಳತನ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಊ) ಶ್ರೀಗಂಧ ಬೆಳೆಯ ವಿಸ್ತೀರ್ಣ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು ?

## ಮೇಕೆದಾಟು ಬಳಿ ಅಣೆಕಟ್ಟು ಕಟ್ಟುವ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–**

೧೨೬೯ (೧೬೯೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನ ಪ್ರಕಾರ ತಮಿಳುನಾಡು ರಾಜ್ಯಕ್ಕೆ ಹರಿಸುವ ನೀರಿನ ಪ್ರಮಾಣ ಎಷ್ಟು ;

(ಆ) ಪ್ರತಿ ವರ್ಷ ಎಷ್ಟು ಪ್ರಮಾಣದ ನೀರು ಕಾವೇರಿ ನದಿ ಮೂಲಕ ಹರಿದು ಹೋಗುತ್ತಿದೆ ; (ಕಳೆದ ೧೦ ವರ್ಷಗಳ ಅಂಕಿ ಅಂಶಗಳನ್ನು ನೀಡುವುದು)

(ಇ) ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಬಳಿ ಅಣೆಕಟ್ಟು ಕಟ್ಟಲು ಸರ್ಕಾರ ಯೋಜಿಸುತ್ತಿದ್ದೆಯೇ ;

(ಈ) ಹಾಗಿದ್ದಲ್ಲಿ, ಸದರಿ ಅಣೆಕಟ್ಟಿನ ರೂಪುರೇಷಗಳೇನು ? (ವಿವರ ನೀಡುವುದು)

## ಕೈಗಾರಿಕಾ ತರಬೇತಿ ಕೇಂದ್ರಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–**

೧೨೭೦ (೧೭೦೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಒಟ್ಟು ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸರ್ಕಾರಿ, ಅನುದಾನಿ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು; ವಿವರ ನಿಡುವುದು ;

(ಇ) ರಾಜ್ಯದಲ್ಲಿ ಸರ್ಕಾರಿ ವೇತನಾನುದಾನಕ್ಕೆ ಒಳಪಡಲು ಅರ್ಹ ಹೊಂದಿರುವ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು ; ಅವು ಯಾವುವು ;

(ಈ) ಅರ್ಹತೆ ಹೊಂದಿರುವ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಅನುದಾನ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು ;

(ಉ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ;

(ಊ) ಯಾವ ಕಾಲಮಿತಿಯೊಳಗೆ ಈ ತರಬೇತಿ ಕೇಂದ್ರಗಳನ್ನು ಅನುದಾನಕ್ಕೆ ಒಳಪಡಿಸಲಾಗುತ್ತದೆ ? (ವಿವರ ನಿಡುವುದು)

## ಕಂದಾಯ ಗ್ರಾಮಗಳ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೨೭೧(೧೭೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕಂದಾಯ ಗ್ರಾಮಗಳಲ್ಲದ ಬೇಚರಾಕ್ ಗ್ರಾಮಗಳ ಸಂಖ್ಯೆ ಎಷ್ಟು ;

(ಆ) ಈ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಇರುವ ತೊಂದರೆಗಳೇನು ?

## ಯುವಜನ ಸೇವಾ ಆಯೋಗದ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೨೭೨ (೧೭೦೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಯುವಜನ ಸೇವಾ ಆಯೋಗದ ಇಲಾಖೆಗೆ ಮೀಸಲಿಟ್ಟಿರುವ ಅನುದಾನವೆಷ್ಟು ;

(ಆ) ಈ ಅನುದಾನದಿಂದ ಯುವ ಜನ ಸಬಲೀಕರಣ ಸಾಧ್ಯವೇ ;

(ಇ) ಯುವ ಜನ ಸಬಲೀಕರಣಕ್ಕೆ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು ? (ಯೋಜನೆವಾರು ವಿವರ ನೀಡುವುದು)

## ಮೂಲಗೇಣಿ / ಒಳ ಮೂಲಗೇಣಿ ವಕ್ಕಲುಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೨೭೩ (೧೭೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೂಲಗೇಣಿ ಅಥವಾ ಒಳ ಮೂಲಗೇಣಿ ವಕ್ಕಲುಗಳಿಗೆ ಸಂಪೂರ್ಣ ಹಕ್ಕು ಕೊಡಿಸುವ ಕಾನೂನು ೨೦೧೧ ರಲ್ಲಿ ಜಾರಿಯಾಗಿದ್ದರೂ ನಿಯಮಾವಳಿ ರಚನೆ ವಿಳಂಬವಾಗಲು ಕಾರಣವೇನು ;

(ಆ) ಮೂಲದಾರರು ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೂ ಮೂಲಿಗೇಣಿ ಕಾನೂನಿಗೆ ತಡೆಯಾಜ್ಞೆ ನೀಡದೆ ಇದ್ದರೂ ಇಲಾಖೆಯು ವಿಳಂಬ ನೀತಿ ಅನುಸರಿಸಲು ಕಾರಣವೇನು ;

(ಇ) ಮೂಲದಾರರು ಮೂಲಗೇಣಿದಾರರನ್ನು ಅನಾವಶ್ಯವಾಗಿ ಶೋಷಣೆಗೆ ಒಳಪಡಿಸುವುದನ್ನು ನಿಲ್ಲಿಸಲು ಇಲಾಖೆ ನಿಯಮಾವಳಿ ರಚಿಸದೆ ಇರಲು ಕಾರಣವೇನು ; ನಿಯಮಾವಳಿ ರಚಿಸಲು ಇಲಾಖೆಯ ಮುಂದಿರುವ ಸಮಸ್ಯೆ ಏನು ; ಎಷ್ಟು ಅವಧಿ ಒಳಗಡೆ ರಚಿಸಲಾಗುವುದು ?

## ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೧೨೭೪ (೧೭೦೬) ಮಾನ್ಯ ಕಾರ್ಮಿಕರ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು ; ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರು ಈ ವೃತ್ತಿಯಲ್ಲಿ ನಿರತರಾಗಿದ್ದಾರೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಬೀಡಿ ಕಾರ್ಮಿಕರಲ್ಲಿ ಮಹಿಳೆಯರ ಸಂಖ್ಯೆ ಎಷ್ಟು ; ರಾಜ್ಯದ ಯಾವ ಭಾಗದಲ್ಲಿ ಅತ್ಯಂತ ಹೆಚ್ಚು ಬೀಡಿ ಕಾರ್ಮಿಕರು ಇದ್ದಾರೆ ; ರಾಜ್ಯದಲ್ಲಿ ಎಷ್ಟು ಬೀಡಿ ಕಂಪನಿಗಳು ಇವೆ ; (ವಿವರ ನೀಡುವುದು)

(ಇ) "ಬೀಡಿ ವರ್ಕರ್ ವೆಲ್ಫೇರ್ ಫಂಡ್" ಇದ್ದರೆ ಆಸ್ಪತ್ರೆಯಲ್ಲಿ ಎಲ್ಲಿ ಕಾರ್ಯನಿರ್ವಹಿಸುತ್ತಿದೆ ; (ವಿವರ ನೀಡುವುದು)

(ಈ) ಯಾವ ಸೌಲಭ್ಯಗಳನ್ನು ಬೀಡಿ ಕಾರ್ಮಿಕರಿಗೆ ನೀಡುತ್ತಿದ್ದಾರೆ ; (ವಿವರ ನೀಡುವುದು)

(ಉ) ಬೀಡಿ ಕಾರ್ಮಿಕರ ಆಸ್ಪತ್ರೆಯನ್ನು ಮಂಗಳೂರಿನಲ್ಲಿ ಪ್ರಾರಂಭಿಸಲು ಇಲಾಖೆ ಕ್ರಮ ಕೈಗೊಳ್ಳುವುದೇ ?

## ಡ್ರಜಿಂಗ್ ಕಾಮಗಾರಿಯ ಇಲಾಖೆಯ ಅನುದಾನ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೨೭೫ (೧೭೦೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡ್ರಜಿಂಗ್ ಕಾಮಗಾರಿಗೆ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಮೀಸಲಿಟ್ಟ ಅನುದಾನ ಎಷ್ಟು ; (ವಿವರ ನೀಡುವುದು)

(ಆ) ರಾಜ್ಯದ ಯಾವ ಯಾವ ಬಂದರು ಪ್ರದೇಶದಲ್ಲಿ ಡ್ರಜಿಂಗ್ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ ; ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಇ) ಬಂದರು ಇಲಾಖೆ ಡ್ರಜಿಂಗ್ ಮಾಡದಿರುವುದರಿಂದ ಮೀನುಗಾರಿಕೆ ದೋಣಿಗಳು ಅಪಘಾತವಾದ ಪ್ರಕರಣಗಳು ಎಷ್ಟು ;

(ಈ) ಮಂಗಳೂರಿನ ಬೆಂಗ್ರೆ ಪೆರಿ ಪ್ರದೇಶದಲ್ಲಿ ಡ್ರಜಿಂಗ್ ಮಾಡದೇ ಸರ್ವಿಸ್ ಬೋಟುಗಳು ತೊಂದರೆ ಅನುಭವಿಸುವುದನ್ನು ತಡೆಯಲು ಇಲಾಖೆ ಕೈಗೊಂಡ ಕ್ರಮಗಳೇನು ?

## ಮೀನುಗಾರರಿಗೆ ಇಲಾಖಾವತಿಯಿಂದ ನೀಡುವ ವಿವಿಧ ಸೌಲಭ್ಯಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೨೭೬ (೧೭೦೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರಸ್ತುತ ಪ್ರತಿದಿನ ಎಷ್ಟು ಟನ್ ಮೀನುಗಳನ್ನು ಉತ್ಪಾದಿಸಲಾಗುತ್ತಿದೆ ; ರಾಜ್ಯದಲ್ಲಿರುವ ಬೇಡಿಕೆ ಎಷ್ಟು ; ರಾಜ್ಯಕ್ಕೆ ಹೊರ ರಾಜ್ಯಗಳಿಂದ ಮೀನುಗಳನ್ನು ತರಲಾಗುತ್ತಿದೆಯೇ ; ಯಾವ ಯಾವ ರಾಜ್ಯಗಳಿಂದ ತರಲಾಗುತ್ತಿದೆ ; (ವಿವರ ನೀಡುವುದು)

(ಆ) ಮೀನುಗಾರಿಕೆ ಇಲಾಖಾವತಿಯಿಂದ ನೀಡುವ ವಿವಿಧ ಸೌಲಭ್ಯಗಳು ಯಾವುವು ; ಇದಕ್ಕೆ ತಗಲುವ ವೆಚ್ಚ ಎಷ್ಟು ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಮೀನುಗಾರಿಕಾ ಬಂದರುಗಳನ್ನು ಪ್ರಾರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುತ್ತದೆ ? (ವಿವರ ನೀಡುವುದು)

## ಉಡುಪಿ ಜಿಲ್ಲೆಯಲ್ಲಿ ಅಕ್ರಮ-ಸಕ್ರಮದಡಿ ಮಂಜೂರಾತಿ ಕೋರಿ ಬಂದ ಅರ್ಜಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೭೭(೧೭೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯಲ್ಲಿ ಅಕ್ರಮ-ಸಕ್ರಮದಡಿ ಅರ್ಜಿ ನಮೂನೆ ೫೦ ಮತ್ತು ೫೩ರಡಿಯಲ್ಲಿ ಮಂಜೂರಾತಿಯಾದ ಪ್ರಕರಣಗಳೆಷ್ಟು ;

ಮತ್ತು ತಿರಸ್ಕೃತವಾದ ಪ್ರಕರಣಗಳೆಷ್ಟು ; ಮತ್ತು ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳೆಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಆ) ಈ ಅಕ್ರಮ-ಸಕ್ರಮದಡಿ ಅರ್ಜಿ ನಮೂನೆ ೫೦ ಮತ್ತು ೫೩ರಡಿಯಲ್ಲಿ ಮಂಜೂರಾತಿ ಕೋರಿ ಬಂದ ಅರ್ಜಿಗಳಲ್ಲಿ ಹಣ ಕಟ್ಟಿದ ಪ್ರಕರಣಗಳೆಷ್ಟು ; ಮತ್ತು ಹಣ ಕಟ್ಟಲು ಬಾಕಿ ಇರುವ ಪ್ರಕರಣಗಳೆಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಇ) ಈ ಅಕ್ರಮ-ಸಕ್ರಮದಡಿ ಅರ್ಜಿ ನಮೂನೆ ೫೦ ಮತ್ತು ೫೩ರಡಿಯಲ್ಲಿ ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲಾದ ಪ್ರಕರಣಗಳೆಷ್ಟು ; ಮತ್ತು ಹಕ್ಕುಪತ್ರ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಈ) ಈ ಅಕ್ರಮ-ಸಕ್ರಮದಡಿ ಅರ್ಜಿ ನಮೂನೆ ೫೦ ಮತ್ತು ೫೩ರಡಿಯಲ್ಲಿ ಮಂಜೂರಾದ ಮತ್ತು ಮಂಜೂರಾತಿ ಕೋರಿಬಂದ ಅರ್ಜಿಗಳಲ್ಲಿ ಸಹಾಯಕ ಕಮೀಷನರ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾದ ಪ್ರಕರಣಗಳೆಷ್ಟು ; ಅದರಲ್ಲಿ ಖಾಸಗಿಯವರು ದಾಖಲಿಸಿದ ಪ್ರಕರಣಗಳೆಷ್ಟು ; ಮತ್ತು ತಹಶೀಲ್ದಾರರು ದಾಖಲಿಸಿದ ಪ್ರಕರಣಗಳೆಷ್ಟು ; ಇವುಗಳಲ್ಲಿ ಇತ್ಯರ್ಥಪಡಿಸಲಾದ ಪ್ರಕರಣಗಳೆಷ್ಟು ; ಮತ್ತು ಇತ್ಯರ್ಥಪಡಿಸಲು ಬಾಕಿ ಇರುವ ಪ್ರಕರಣಗಳೆಷ್ಟು ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

# ವರಾಹಿ ನೀರಾವರಿ ಯೋಜನೆಯ ಕಾಲುವೆ ಹಾಗೂ ಉಪಕಾಲುವೆ ಕಾಮಗಾರಿ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೭೮(೧೭೧ಳ) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ವರಾಹಿ ನೀರಾವರಿ ಯೋಜನೆಯಲ್ಲಿ ಕಾಲುವೆ ಮತ್ತು ಉಪಕಾಲುವೆ ನಿರ್ಮಾಣ ಕಾಮಗಾರಿ ಇನ್ನು ಎಷ್ಟು ಕಿ.ಮಿ ಬಾಕಿಯಿದೆ ; ಈ ಬಾಕಿ ಕಾಮಗಾರಿಗೆ ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

(ಆ) ಈ ಯೋಜನೆಯಲ್ಲಿ ಕಾಲುವೆ ಮತ್ತು ಉಪಕಾಲುವೆ ನಿರ್ಮಾಣ ಕಾಮಗಾರಿಗೆ ಎಷ್ಟು ಅರಣ್ಯ ಭೂಮಿಯ ಅಗತ್ಯತೆಯಿದೆ ; ಮತ್ತು ಈ ಅರಣ್ಯ ಭೂಮಿಗಳ ತೆರವು ಕಾರ್ಯ ಯಾವ ಹಂತದಲ್ಲಿದೆ ; ಅರಣ್ಯ ಭೂಮಿಯ ತೆರವಿಗೆ ಅರಣ್ಯ ಇಲಾಖೆಯ ಆಕ್ಷೇಪಗಳೇನಾದರೂ ಇದೆಯೇ; ಅರಣ್ಯ ಇಲಾಖೆಯ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು ಸರಿಪಡಿಸಲು ಕರ್ನಾಟಕ ನೀರಾವರಿ ಇಲಾಖೆ ಅರಣ್ಯ ಇಲಾಖೆಗೆ ಪತ್ರವನ್ನೇನಾದರೂ ಸಲ್ಲಿಸಿದೆಯೇ ; ಇಲ್ಲವಾದಲ್ಲಿ ಕಾರಣವೇನು ; (ಅರಣ್ಯ ಇಲಾಖೆಯ ಆಕ್ಷೇಪದ ಪ್ರತಿ ಹಾಗೂ ಕರ್ನಾಟಕ ನೀರಾವರಿ ಇಲಾಖೆಯು ಅರಣ್ಯ ಇಲಾಖೆಗೆ ಸಲ್ಲಿಸಿದ ಪತ್ರದ ಪ್ರತಿ ಒದಗಿಸುವುದು)

(ಇ) ಕರ್ನಾಟಕ ನೀರಾವರಿ ನಿಗಮದಿಂದ ವರಾಹಿ ನೀರಾವರಿ ಯೋಜನೆಗಾಗಿ ಈ ತನಕ ಅರಣ್ಯ ಇಲಾಖೆಗೆ ಪಾವತಿಸಲಾದ ಮೊತ್ತವೆಷ್ಟು ಮತ್ತು ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು ?

## ಉಡುಪಿ ಜಿಲ್ಲೆಯಲ್ಲಿ ಕೊರತೆ ಇರುವ ಭೂಮಾಪಕರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೭೯(೧೭೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಗೆ ಮಂಜೂರಾದ ಭೂಮಾಪಕರ ಒಟ್ಟು ಸಂಖ್ಯೆ ಎಷ್ಟು; ಮತ್ತು ಕೊರತೆ ಇರುವ ಭೂಮಾಪಕರ ಸಂಖ್ಯೆ ಎಷ್ಟು; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಪರವಾನಿಗೆ ಭೂಮಾಪಕರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳೆಷ್ಟು ; ಇವುಗಳಲ್ಲಿ ಭೂಮಾಪನ ಮಾಡಲಾದ ಅರ್ಜಿಗಳೆಷ್ಟು; ಮತ್ತು ಭೂ ಮಾಪನ ಮಾಡಲು ಬಾಕಿ ಇರುವ ಅರ್ಜಿಗಳೆಷ್ಟು ; (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ಈ ಜಿಲ್ಲೆಯಲ್ಲಿ ಭೂಮಾಪನಕ್ಕೆ ಅರ್ಜಿ ಸಲ್ಲಿಸಿ ಮೂರು ವರ್ಷ ಕಳೆದರೂ ಭೂಮಾಪನವಾಗದ ಪ್ರಕರಣಗಳೆಷ್ಟು ; ಮತ್ತು

ಭೂಮಾಪನಕ್ಕೆ ಅರ್ಜಿ ಸಲ್ಲಿಸಿ ಎರಡು ವರ್ಷ ಕಳೆದರೂ ಭೂಮಾಪನವಾಗದ ಪ್ರಕರಣಗಳೆಷ್ಟು ; ಮತ್ತು ಭೂಮಾಪನಕ್ಕೆ ಅರ್ಜಿ ಸಲ್ಲಿಸಿ ಒಂದು ವರ್ಷ ಕಳೆದರೂ ಭೂಮಾಪನವಾಗದ ಪ್ರಕರಣಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಭೂಮಾಪನವನ್ನು ಸಕಾಲ ಯೋಜನೆಯಡಿ ಸೇರಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ ಕಾರಣವೇನು ; ಹಾಗೂ ಭೂಮಾಪನ ಕೋರಿ ಅರ್ಜಿ ಸಲ್ಲಿಸುವವರಿಗೆ ಟೋಕನ್ ನೀಡುವ ವ್ಯವಸ್ಥೆ ಕಲ್ಪಿಸಲಾಗುವುದೇ ?

## ವರಾಹಿ ನೀರಾವರಿ ಯೋಜನೆಗೆ ಕೇಳಲಾದ ಅರಣ್ಯ ಭೂಮಿ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೮೦(೧೭೧೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ವರಾಹಿ ನೀರಾವರಿ ಯೋಜನೆಯ ಕಾಲುವೆ ಮತ್ತು ಉಪಕಾಲುವೆಗಳ ನಿರ್ಮಾಣಕ್ಕಾಗಿ ಕೇಳಲಾದ ಅರಣ್ಯ ಭೂಮಿ ಎಷ್ಟು; ಹಾಗೂ ಮಂಜೂರು ಮಾಡಲಾದ ಮಂಜೂರಾತಿಗೆ ಬಾಕಿ ಇರುವ ಅರಣ್ಯ ಭೂಮಿಯೆಷ್ಟು; ಅರಣ್ಯ ಭೂಮಿಗೆ ಕರ್ನಾಟಕ ನೀರಾವರಿ ನಿಗಮದಿಂದ ಪಾವತಿಸಲಾದ ಮೊತ್ತವೆಷ್ಟು ; ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು ;

(ಆ) ಈ ವರಾಹಿ ನೀರಾವರಿ ಯೋಜನೆಯ ಕಾಲುವೆ ಮತ್ತು ಉಪಕಾಲುವೆಗಳ ನಿರ್ಮಾಣಕ್ಕಾಗಿ ಕೆ.ಸಿ.ಡಿ.ಸಿ ಯಿಂದ ನೀಡಲಾದ ಅರಣ್ಯ ಭೂಮಿಯೆಷ್ಟು ; ನೀಡಲು ಬಾಕಿ ಇರುವ ಅರಣ್ಯ ಭೂಮಿಯೆಷ್ಟು ; ಮತ್ತು ಕರ್ನಾಟಕ ನೀರಾವರಿ ನಿಗಮದಿಂದ ಪಾವತಿಸಲಾದ ಮೊತ್ತವೆಷ್ಟು ; ಮತ್ತು ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು ;

(ಇ) ಸುಮಾರು ೩೫ ವರ್ಷಗಳ ಹಿಂದೆ ಪ್ರಾರಂಭವಾಗಿ, ಈ ತನಕ ಸುಮಾರು ೬೦೦ ಕೋಟಿ ರೂಪಾಯಿ ವೆಚ್ಚವಾದರೂ ಸಹ ಇಲ್ಲಿ ತನಕ ಯೋಜನೆ ಪೂರ್ಣಗೊಳ್ಳದಿರಲು ಯೋಜನೆಗೆ ಅರಣ್ಯ ಭೂಮಿ ನೀಡುವಲ್ಲಿ ಅರಣ್ಯ ಇಲಾಖೆಯ ವಿಳಂಬ ನೀತಿಯೇ ಕಾರಣವೆನ್ನುವುದು ಸರ್ಕಾರ ಗಮನಿಸಿದೆಯೇ ; ಗಮನಿಸಿದ್ದಲ್ಲಿ, ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ?

## ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬೈಂದೂರು ವೃತ್ತಗಳ ಅರಣ್ಯ ಇಲಾಖೆಯ ನರ್ಸರಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೧೨೮೧(೧೭೧೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಕುಂದಾಪುರ ವೃತ್ತ ಮತ್ತು ಬೈಂದೂರು ವೃತ್ತಗಳಲ್ಲಿರುವ ಅರಣ್ಯ ಇಲಾಖೆಯ ನರ್ಸರಿಗಳು ಎಷ್ಟು ; ಯಾವುವು ; ಕಳೆದ ಮೂರು ವರ್ಷಗಳಲ್ಲಿ ಈ ನರ್ಸರಿಗಳಲ್ಲಿ

ನೆಡಲಾದ ಗಿಡಗಳು ಎಷ್ಟು ; ಯಾವುವು ; ಮತ್ತು ಇದಕ್ಕಾಗಿ ವೆಚ್ಚ ಮಾಡಲಾದ ಮೊತ್ತವೆಷ್ಟು ; (ವರ್ಷವಾರು, ವೃತ್ತವಾರು, ನರ್ಸರಿವಾರು ವಿವರ ನೀಡುವುದು)

(ಆ) ಸದರಿ ನರ್ಸರಿಗಳಿಂದ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಗ್ರಾಮಗಳಿಗೆ ಎಷ್ಟು ಗಿಡಗಳನ್ನು ವಿತರಿಸಲಾಗಿದೆ ಮತ್ತು ಅವುಗಳ ನಿರ್ವಹಣೆಗೆ ತಗುಲಿದ ಮೊತ್ತವೆಷ್ಟು ; (ವರ್ಷವಾರು, ವೃತ್ತವಾರು ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬೈಂದೂರು ವೃತ್ತಗಳಲ್ಲಿ ಅರಣ್ಯ ಇಲಾಖೆಯವರಿಂದ ಅರಣ್ಯೀಕರಣ ಮಾಡಲಾದ ಒಟ್ಟು ಭೂಮಿ ಎಷ್ಟು; ಮತ್ತು ಇವುಗಳಿಗೆ ತಗುಲಿದ ವೆಚ್ಚವೆಷ್ಟು ; (ವೃತ್ತವಾರು, ವರ್ಷವಾರು, ಗ್ರಾಮವಾರು, ವಿಸ್ತೀರ್ಣವಾರು ವಿವರ ನೀಡುವುದು)

(ಈ) ಕಳೆದ ಮೂರು ವರ್ಷಗಳಲ್ಲಿ ಸದರಿ ಅರಣ್ಯೀಕರಣ ಮಾಡಲಾದ ಪ್ರದೇಶಕ್ಕೆ ತಡೆಬೇಲಿ ಮಾಡಲಾಗಿದೆಯೇ ; ಮಾಡಲಾಗಿದ್ದಲ್ಲಿ ಅದಕ್ಕೆ ತಗುಲಿದ ಮೊತ್ತವೆಷ್ಟು ; ತಡೆಬೇಲಿ ಮಾಡದೆ ಇದ್ದಲ್ಲಿ ಕಾರಣವೇನು? (ವೃತ್ತವಾರು, ಗ್ರಾಮವಾರು, ಮೊತ್ತವಾರು, ವರ್ಷವಾರು ವಿವರ ನೀಡುವುದು)

## ಬನ್ನೇರುಘಟ್ಟ ನ್ಯಾಷನಲ್ ಪಾರ್ಕಿನಲ್ಲಿ ಹೆಚ್ಚುತ್ತಿರುವ ಪ್ರಾಣಿಗಳ ಸಾವಿನ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೨೮೨ (೧೭೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇತ್ತೀಚೆಗೆ ಬನ್ನೇರುಘಟ್ಟ ನ್ಯಾಷನಲ್ ಪಾರ್ಕಿನಲ್ಲಿ ಪ್ರಾಣಿಗಳ ಸಾವಿನ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಳೆದ ೩ ವರ್ಷಗಳ ವಿವರ ನೀಡುವುದು)

(ಆ) ಪ್ರಾಣಿಗಳ ಸಾವಿಗೆ ಕಾರಣಗಳೇನು; ಈ ಕುರಿತು ಸರ್ಕಾರ ಯಾವ ಮುಂಜಾಗ್ರತಾ ಕ್ರಮ ಕೈಗೊಂಡಿದೆ ?

## ಜವಳಿ ಪಾರ್ಕ್‌ಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೨೮೩ (೧೭೧೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಜವಳಿ ಪಾರ್ಕ್‌ಗಳೆಷ್ಟು;

(ಆ) ಈ ಪಾರ್ಕ್‌ಗಳಲ್ಲಿ ಅರ್ಹ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ನಿವೇಶನಗಳಲ್ಲಿ ಎಷ್ಟು ಸಂಸ್ಥೆಗಳು ನಿಗದಿತ ಅವಧಿಯಲ್ಲಿ ಚಟುವಟಿಕೆಗಳನ್ನು ಪ್ರಾರಂಭಿಸಿವೆ; ಅವಧಿ ಮುಗಿದಿದ್ದರೂ ಇನ್ನೂ ಚಟುವಟಿಕೆ ಪ್ರಾರಂಭಿಸದಿರುವ ಸಂಸ್ಥೆಗಳು ಎಷ್ಟು;

(ಇ) ಚಟುವಟಿಕೆ ಪ್ರಾರಂಭಿಸದ ಸಂಸ್ಥೆಗಳಿಗೆ ಮಂಜೂರಾದ ಎಷ್ಟು ನಿವೇಶನಗಳನ್ನು ಹಿಂದಕ್ಕೆ ಪಡೆಯಲಾಗಿದೆ; ಪಡೆಯದಿದ್ದಲ್ಲಿ ಕಾರಣಗಳೇನು;

(ಈ) ಈ ಸಂಸ್ಥೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಊದುಬತ್ತಿ ಕಾರ್ಖಾನೆಯ ಜೀತ ಕಾರ್ಮಿಕರ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೮೪ (೧೭೧೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಸಮೀಪವಿರುವ ಕಗ್ಗಲೀಪುರದ ಊದುಬತ್ತಿ ಕಾರ್ಖಾನೆಯಲ್ಲಿ ೧೦೭ ಕಾರ್ಮಿಕರನ್ನು ಜೀತಕ್ಕೆ ತೆಗೆದುಕೊಂಡು ಕಾರ್ಖಾನೆಯಿಂದ ಹೊರಗೆ ಬಿಡದೆ ೧೮–೨೦ ಗಂಟೆಗಳ ಕಾಲ ಕೆಲಸ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹೆಚ್ಚಿನ ಸಂಬಳ, ಉಳಿದುಕೊಳ್ಳಲು ವಾಸ್ತವ್ಯ, ವಾರಕ್ಕೆ ರಜಾ ಎಂಬ ಆಮಿಷಗಳನ್ನು ಒಡ್ಡಿ ಕಾರ್ಮಿಕರನ್ನು ವಿವಿಧ ಭಾಗಗಳಿಂದ ಕರೆದು ತಂದು ಇದು ಯಾವುದನ್ನೂ ಈಡೇರಿಸದೇ ಕಾರ್ಮಿಕರನ್ನು ಸಂಕಷ್ಟಕ್ಕೆ ಗುರಿ ಮಾಡಿರುವ ಬಗ್ಗೆ ಸರ್ಕಾರದ ಕ್ರಮವೇನು;

(ಇ) ಇಂತಹ ಪ್ರಕರಣಗಳನ್ನು ತಡೆಯುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

## ರಾಜ್ಯದ ಭೂಮಾಪನ ಕಛೇರಿಯಲ್ಲಿ ರೈತರಿಗೆ ಆಗುತ್ತಿರುವ ವಿಳಂಬದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೨೮೫ (೧೭೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಭೂ ಅಳತೆಗಾಗಿ ತಾಲ್ಲೂಕು ಕಛೇರಿಗಳಲ್ಲಿ ಅರ್ಜಿ ಸಲ್ಲಿಸಿ ವರ್ಷಗಟ್ಟಲೇ ಭೂಮಾಪನಾ ಕಛೇರಿಗೆ ರೈತರು ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಭೂ ಅಳತೆಗಾಗಿ ಸಲ್ಲಿಸಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಒಂದು ವರ್ಷ ಎರಡು ವರ್ಷಕ್ಕಿಂತ ಹೆಚ್ಚು ಬಾಕಿ ಇರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಸಕಾಲ ಯೋಜನೆ ಪ್ರಕಾರ ಯಾವ ಯಾವ ಪ್ರಕರಣಗಳನ್ನು ಎಷ್ಟು ದಿನಗಳಲ್ಲಿ ಇತ್ಯರ್ಥಪಡಿಸಲಾಗುವುದು;

(ಈ) ಬಾಕಿ ಇರುವ ಪ್ರಕರಣಗಳನ್ನು ಯಾವ ಅವಧಿಯಲ್ಲಿ ಇತ್ಯರ್ಥಪಡಿಸಲಾಗುವುದು?

## ಉದ್ಯೋಗ ವಿನಿಮಯ ಕಛೇರಿಯ ಮುಖಾಂತರ ಪದವೀಧರ ನಿರುದ್ಯೋಗಿ ಯುವಕರ ವಿವರ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೨೮೬ (೧೭೨೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳೆಷ್ಟು; (ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್)

(ಆ) ಈ ಉದ್ಯೋಗ ವಿನಿಮಯ ಕೇಂದ್ರದ ಮುಖಾಂತರ ರಾಜ್ಯದಲ್ಲಿ ಎಷ್ಟು ಜನ ನಿರುದ್ಯೋಗಿ ಪದವೀಧರ ಯುವಕರಿರುವರು; (ಮಾಹಿತಿ ನೀಡುವುದು)

(ಇ) ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಿರುದ್ಯೋಗಿ ಪದವೀಧರ ಯುವಕರಿಗೆ ಉದ್ದಿಮೆಗಳಲ್ಲಿ ಹಾಗೂ ಖಾಲಿ ಇದ್ದ ಸರ್ಕಾರಿ ಹುದ್ದೆಗಳಲ್ಲಿ ಸ್ಟೈಫಂಡರಿ ಕೊಟ್ಟು ನೇಮಿಸಿದಂತೆ ಈಗಲೂ ನೇಮಿಸಲು ಸರ್ಕಾರ ಪರಿಶೀಲಿಸುವುದೆ?

## ಬೈಲಹೊಂಗಲ ತಾಲ್ಲೂಕಿನ ನೇಸರಗಿ ಐ.ಟಿ.ಐ ಕಾಲೇಜು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೨೮೭ (೧೭೨೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಸರ್ಕಾರಿ ಐ.ಟಿ.ಐ ಕಾಲೇಜು ಎಂದು ಪ್ರಾರಂಭವಾಯಿತು;

(ಆ) ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಬೇರೆ ಕಾಲೇಜು ಕಟ್ಟಡದಲ್ಲಿ ಈ ಕಾಲೇಜು ನಡೆಯುತ್ತಿರುವ ಸಂಗತಿ ನಿಜವೇ;

(ಇ) ಹಾಗಿದ್ದಲ್ಲಿ, ಈ ಕಾಲೇಜಿನ ಕಟ್ಟಡ ಎಂದು ಕಟ್ಟಲಾಗುವುದು; ಇನ್ನು ಎಷ್ಟು ದಿನ ಬೇಕು;

(ಈ) ಕೇಂದ್ರ ಸರ್ಕಾರ ಐ.ಟಿ.ಐ ಕಾಲೇಜು ಕಟ್ಟಲು ಹಣಕಾಸಿನ ನೆರವು ನೀಡುತ್ತಿದ್ದರೂ ಅದರ ಪ್ರಯೋಜನ ಪಡೆಯದಿರಲು ಕಾರಣವೇನು;

(ಉ) ಈ ಕಾಲೇಜಿನೊಂದಿಗೆ ಪ್ರಾರಂಭವಾದ ನಿಡಸೋಸಿ, ಬೆಳಗಾವಿ, ಆರ್.ಎನ್ ಪಾಲಿಟೆಕ್ನಿಕ್, ಕೆಎಲ್‌ಇ ಚಿಕ್ಕೋಡಿ ಮೊದಲಾದ ಕಾಲೇಜುಗಳಲ್ಲಿ ಎಂಟು–ಹತ್ತು ಬ್ರ್ಯಾಂಚ್‌ಗಳನ್ನು ಪ್ರಾರಂಭ ಮಾಡಿದ್ದು, ಆದರೆ ಈ ಕಾಲೇಜು ಪ್ರಾರಂಭವಾದಾಗಿನಿಂದ ಕೇವಲ ಎರಡೇ ಬ್ರ್ಯಾಂಚಗಳನ್ನು ಪ್ರಾರಂಭ ಮಾಡಿದ ಸಂಗತಿ ನಿಜವೇ;

(ಊ) ಹಾಗಿದ್ದಲ್ಲಿ, ಈ ಕಾಲೇಜಿನಲ್ಲಿ ಮೂಲಭೂತ ಸೌಕರ್ಯ ಒದಗಿಸಿ ಹೆಚ್ಚಿನ ಕೋರ್ಸ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

## ಕಳಸಾ ಬಂಡೂರಿ ನೀರಾವರಿ ಯೋಜನೆಯ ಕೆಲಸದ ವಿವರ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೨೮೮ (೧೭೨೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳಸಾ ಬಂಡೂರಿ ನೀರಾವರಿ ಕಾರ್ಯ ಈಗ ಯಾವ ಹಂತದಲ್ಲಿರುವುದು;

(ಆ) ಈ ಯೋಜನೆಯಿಂದ ಕುಡಿಯುವ ನೀರಿನ ಸಲುವಾಗಿ ಅನುಕೂಲವಾಗುವುದರಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

(ಇ) ಈ ಯೋಜನೆಯಿಂದ ಎಷ್ಟು ಟಿ.ಎಂ.ಸಿ ನೀರು ಕರ್ನಾಟಕ ರಾಜ್ಯಕ್ಕೆ ಲಭಿಸುವುದು;

(ಈ) ಹಿಂದಿನ ಸರ್ಕಾರದ ಸಚಿವರು ಈ ಕಾರ್ಯದ ಬಗ್ಗೆ ಅಡಿಗಲ್ಲು ಇಟ್ಟಿದ್ದು, ಅಂದಿನಿಂದ ಇಲ್ಲಿಯವರೆಗೆ ಯಾವ-ಯಾವ ಕೆಲಸ ಮಾಡಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ;

(ಉ) ಈ ಕೆಲಸಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆಯದೇ ಕೆಲಸ ಪ್ರಾರಂಭಿಸಿದ ಸಂಗತಿ ನಿಜವೇ ಹಾಗೂ ಈಗಾಗಲೇ ಖರ್ಚು ಮಾಡಿದ ಹಣ ವ್ಯರ್ಥವಾದ ಸಂಗತಿ ನಿಜವೇ;

(ಊ) ಈ ಕೆಲಸಕ್ಕೆ ಆಡಳಿತಾತ್ಮಕ, ತಾಂತ್ರಿಕ ಮಂಜೂರಾತಿ ಎಂದು; ಹಾಗೂ ಎಷ್ಟು ಮೊತ್ತಕ್ಕೆ ನೀಡಲಾಯಿತು?

## ಜವಳಿ ಖಾತೆ ಸಚಿವರು ಘೋಷಿಸಿದ ಬಿ.ಪಿ.ಎಲ್ ಕಾರ್ಡುದಾರರಿಗೆ ವಸ್ತ್ರಭಾಗ್ಯ ಯೋಜನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೨೮೯ (೧೭೨೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜವಳಿ ಖಾತೆ ಸಚಿವರು ಇನ್ನು ಮುಂದೆ ಬಿ.ಪಿ.ಎಲ್ ಕಾರ್ಡು ಹೊಂದಿದ ಬಡ ಜನರಿಗೆ ಹಬ್ಬಗಳಲ್ಲಿ ವಸ್ತ್ರ ಭಾಗ್ಯ ಯೋಜನೆ ಕೈಗೊಳ್ಳುವುದಾಗಿ ಪತ್ರಿಕಾ ಹೇಳಿಕೆ ಮುಖಾಂತರ ಘೋಷಣೆ ಮಾಡಿದ್ದು, ಈಗ ಆ ಕಾರ್ಯಕ್ರಮ ಯಾವ ಹಂತದಲ್ಲಿದೆ;

(ಆ) ಈ ಯೋಜನೆಯ ರೂಪುರೇಷೆಗಳೇನು; ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆಯೇ;

(ಇ) ಈ ಯೋಜನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಭಾಷಣದಲ್ಲಾಗಲಿ ಅಥವಾ ಯಾವುದೇ ಹಣ ಆಯವ್ಯಯದಲ್ಲಿ ಇಡದೇ ಈ ಯೋಜನೆ ಕೈಗೊಳ್ಳಲಾಗುವುದು ಎಂದು ಪತ್ರಿಕಾ ಹೇಳಿಕೆ ಮುಖಾಂತರ ಘೋಷಿಸುವುದು ಸರಿಯೇ;

(ಈ) ಹಾಗಾದರೆ, ಈ ಯೋಜನೆ ಕೈಗೊಳ್ಳಲಾಗುವುದೇ; ಯಾವಾಗ;

(ಉ) ಹಿಂದಿನ ಸರ್ಕಾರದವರು ಬಡವರಿಗೆ ಸೀರೆ ಕೊಡುವ ಯೋಜನೆ ಇದ್ದು ಅದನ್ನು ನಿಲ್ಲಿಸಿದ ಕಾರಣಗಳೇನು?

## ಭೂಮಿಯ ವರ್ಗಗಳ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೨೯೦ (೧೭೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಮೀನುಗಳಲ್ಲಿ ಎಷ್ಟು ವಿಧಗಳಿವೆ; ಅವು ಯಾವುವು ;

(ಆ) ಕಾಯ್ದಿರಿಸಿದ ಜಮೀನುಗಳನ್ನು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಮಂಜೂರು ಮಾಡಬಹುದೇ; ಇದರ ಸಂಬಂಧ ಇರುವ ನಿಯಮಗಳೇನು ; (ಮಾಹಿತಿ ನೀಡುವುದು)

(ಇ) ಭೂ ಉಪಯೋಗ ಪರಿವರ್ತನೆ ಅಂದರೆ ಏನು; ಯಾವ ಯಾವ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡಬಹುದು; ಇದರ ಸಂಬಂಧ ಸಕ್ಷಮ ಪ್ರಾಧಿಕಾರಿಗಳಿಗೆ ಇರುವ ಅಧಿಕಾರಗಳೇನು; (ಮಾಹಿತಿ ನೀಡುವುದು)

(ಈ) ಎ.ಬಿ.ಸಿ.ಡಿ.ಇ.ಎಫ್.ಜಿ.ಹೆಚ್. ವರ್ಗದ ಜಮೀನುಗಳು ಅಂದರೆ ಯಾವುವು? (ವಿವರ ನೀಡುವುದು)

## ಅತಿಕ್ರಮಣವಾದ ರುದ್ರಭೂಮಿಯನ್ನು ತೆರವುಗೊಳಿಸುವ ಬಗ್ಗೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು)**

೧೨೯೧ (೧೩೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಾವಣಗೆರೆ ಜಿಲ್ಲೆಯಲ್ಲಿ ರುದ್ರಭೂಮಿ ಇಲ್ಲದೆ ಇರುವ ಗ್ರಾಮಗಳ ಸಂಖ್ಯೆ ಎಷ್ಟು; ಆ ಗ್ರಾಮಗಳು ಯಾವುವು;

(ಆ) ಇದರಲ್ಲಿ ಅಕ್ರಮವಾಗಿ ಎಷ್ಟು ಎಕರೆ ರುದ್ರಭೂಮಿ ಒತ್ತುವರಿಯಾಗಿದೆ; (ವಿವರ ನೀಡುವುದು)

(ಇ) ಈ ಅತಿಕ್ರಮಣವಾದ ರುದ್ರಭೂಮಿಯನ್ನು ತೆರವುಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

(ಈ) ರುದ್ರಭೂಮಿ ಇಲ್ಲದೇ ಇರುವ ಗ್ರಾಮಗಳಿಗೆ ರುದ್ರಭೂಮಿ ಒದಗಿಸುವ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ?

## ರುದ್ರಭೂಮಿಗಳನ್ನು ಒದಗಿಸುವ ಬಗ್ಗೆ.

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನ ಸಭೆಯಿಂದ ಚುನಾಯಿತರಾದವರು):–**

೧೨೯೨ (೧೩೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ, ಗದಗ, ವಿಜಯಪುರ ಜಿಲ್ಲೆಯಲ್ಲಿ ರುದ್ರಭೂಮಿ ಇಲ್ಲದೆ ಇರುವ ಗ್ರಾಮಗಳ ಸಂಖ್ಯೆ ಎಷ್ಟು; ಆ ಗ್ರಾಮಗಳು ಯಾವುವು;

(ಆ) ಇದರಲ್ಲಿ ಅಕ್ರಮವಾಗಿ ಎಷ್ಟು ಎಕರೆ ರುದ್ರಭೂಮಿ ಒತ್ತುವರಿಯಾಗಿದೆ; (ವಿವರ ನೀಡುವುದು)

(ಇ) ಈ ಅತಿಕ್ರಮಣವಾದ ರುದ್ರಭೂಮಿಯನ್ನು ತೆರವುಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

(ಈ) ರುದ್ರಭೂಮಿ ಇಲ್ಲದೇ ಇರುವ ಗ್ರಾಮಗಳಿಗೆ ರುದ್ರಭೂಮಿ ಒದಗಿಸುವ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ ?

## ಅರಣ್ಯ ಕೈಗಾರಿಕಾ ನಿಗಮದಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ಸೌಲಭ್ಯ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೯೩ (೧೩೨೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಅರಣ್ಯ ಕೈಗಾರಿಕಾ ನಿಗಮದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ

ಸಂಖ್ಯೆ ಎಷ್ಟು; ಅವರುಗಳು ಅರ್ಜಿ ಸಲ್ಲಿಸಿದ ದಿನಾಂಕ ಯಾವುದು; (ಹೆಸರು, ದಿನಾಂಕ ಸಹಿತ ವಿವರ ಒದಗಿಸುವುದು)

(ಆ) ಇವರುಗಳಿಗೆ ಉದ್ಯೋಗ ನೀಡುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; ಎಷ್ಟು ದಿನಗಳಲ್ಲಿ ಇವರುಗಳಿಗೆ ಉದ್ಯೋಗ ಒದಗಿಸಲಾಗುವುದು?

## ಆರೋಗ್ಯ ಇಲಾಖೆಗೆ ಸ್ವೀಕೃತವಾದ ಅನುದಾನದ ಕುರಿತು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೯೪ (೧೭೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯಲ್ಲಿನ ಅರಣ್ಯ ಇಲಾಖೆಯಲ್ಲಿ ಪ್ರತ್ಯೇಕವಾಗಿ ೨೦೧೦-೨೦೧೧ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆಯಾದ ಅನುದಾನ ಎಷ್ಟು; (ಸಾಮಾಜಿಕ ಮತ್ತು ಪ್ರಾದೇಶಿಕವಾಗಿ ವಲಯುವಾರು ಲೆಕ್ಕಶೀರ್ಷಿಕೆಯ ವಿವರ ನೀಡುವುದು)

(ಆ) ಸದರಿ ಅನುದಾನದಲ್ಲಿ ಸಾಧಿಸಿದ ಪ್ರಗತಿ ಏನು; (ವರದಿಯನ್ನು ನೀಡುವುದು)

(ಇ) ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ೨೦೧೦-೨೦೧೧ನೇ ಸಾಲಿನಿಂದ ಪ್ರಸಕ್ತ

ಸಾಲಿನವರೆಗೂ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು; ಇದಕ್ಕೆ ತಗುಲಿದ ವೆಚ್ಚ ಎಷ್ಟು; (ವಲಯವಾರು ವಿವರ ನೀಡುವುದು)

(ಈ) ಕಾಮಗಾರಿಗಳ ಗುಣಮಟ್ಟ ಪರಿವೀಕ್ಷಣೆಯನ್ನು ಯಾವ ಏಜೆನ್ಸಿಗೆ ನೀಡಲಾಗಿದೆ ;

(ಉ) ಸದರಿ ಕಾಮಗಾರಿಗಳ ಸ್ಥಳ ತನಿಖೆ ಮಾಡಿ ನೀಡಿರುವ ವರದಿಯ ಪ್ರಮುಖ ಅಂಶಗಳಾವುವು; (ವಿವರ ನೀಡುವುದು)

(ಊ) ಕಾಮಗಾರಿಗಳು ಕಳಪೆಯಾಗಿರುವ ಕುರಿತು ದೂರುಗಳೇನಾದರು ಸ್ವೀಕೃತವಾಗಿವೆಯೇ ;

(ಋ) ಸ್ವೀಕೃತವಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂ-59/ಕಾ.ಸೂ. 03579/700 ಪ್ರತಿಗಳು/13-07-2015